ಅಲ್ಲ, ಪ್ರಶ್ನೆ ಏನೆಂದರೆ, ಇಲ್ಲಿ ಚರ್ಚೆ ಮಾಡುವುದು ಪ್ರೆಸ್‌ನಲ್ಲಿ ಯಾವುದು ಬರಬೇಕು, ಯಾವುದು ಬರಬಾರದು, ಈ ಪ್ರಶ್ನೆ ಅಡಕವಾಗಿದೆ, ವಿಚಾರ ಮಾಡಿ ಎಂದು ಹೇಳುತ್ತೇನೆ.

ಅಧ್ಯಕ್ಷರು:- ಮಾನ್ಯ ಸಭಾನಾಯಕರು, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ವಾಟಾಳ್ ನಾಗರಾಜ್ ಅವರು ಕಳುಹಿಸಿರತಕ್ಕ ಹಕ್ಕುಬಾಧ್ಯತಾ ಸೂಚನೆ ಬಗ್ಗೆ ಸಾಕಷ್ಟು ಬೆಳಕು ಚೆಲ್ಲಿದ್ದಾರೆ ಮತ್ತು ಇದರ ಚೌಕಟ್ಟು ಎಷ್ಟು ಮೂಲಭೂತವಾಗಿದೆ ಎಂಬುದರ ಬಗ್ಗೆ ನನ್ನ ಗಮನ ಸೆಳೆದಿದ್ದಾರೆ. ಇದು ಒಬ್ಬ ಸದಸ್ಯರ ವೈಯುಕ್ತಿಕ ಹಕ್ಕುಬಾಧ್ಯತೆಯ ಜೊತೆಗೆ ಈ ಸಭೆಯ ಮರ್ಯಾದೆ ಮತ್ತು ಸಭೆಯ ಕಾರ್ಯಕಲಾಪಗಳನ್ನು ವರದಿ ಮಾಡುವ ಬಗ್ಗೆ ಈ ಸೂಚನೆಯಲ್ಲಿ ಅಡಕವಾಗಿರುವುದರಿಂದ ನಾನು ಸಮಗ್ರವಾಗಿ ಲೋಕಸಭೆಯಲ್ಲಿ ಕೊಟ್ಟಿರತಕ್ಕ ರೂಲಿಂಗ್ಸ್ ಮತ್ತು ಇದೇ ಸಭೆಯಲ್ಲಿ ಮಾನ್ಯ ಚಂದ್ರೇಗೌಡರು ಏನು ರೂಲಿಂಗ್ಸ್ ಕೊಟ್ಟಿದ್ದಾರೆ, ಎಲ್ಲವನ್ನು ವಿಮರ್ಶೆ ಮಾಡಿ ಅನಂತರ ನಾನು ನನ್ನ ರೂಲಿಂಗ್ ಕೊಡುತ್ತೇನೆ. ಒಂದು ನಿಮಿಷ. ಇದು ಮುಗಿಯಲಿ, ಈಗ ಕಾಗದ ಪತ್ರಗಳನ್ನು ಸಭೆಯ ಮುಂದಿಡುವುದು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಡಾ: ಎಚ್.ಆರ್.ರಾಜು:- (ಸಹಕಾರಿ ರಾಜ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ 1959ನೇ ಸಾಲಿನ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 130ನೇ ಕಲಮಿನ ಮೇರೆಗೆ 1959ನೇ ಸಾಲಿನ ಸಹಕಾರ ಸಂಘಗಳ ಕಾಯ್ದೆಯ 27(1) ಕಲಂಗೆ ಪರುಂತಕವನ್ನು ಅಳವಡಿಸುವುದಕ್ಕೆ ಸಂಬಂಧಿಸಿದ 1990ನೇ ಜೂನ್ 16ನೇ ದಿನಾಂಕದಂದು ಹೊರಡಿಸಲಾದ ಸಿ.ಎಂ.ಡಬ್ಲ್ಯು 97 ಸಿ.ಎಲ್.ಎಂ. ನೇ ಕ್ರಮಾಂಕದ ಆದೇಶವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಅರ್ಜಿಗಳನ್ನೊಪ್ಪಿಸುವುದು

ಶ್ರೀ ಕೆ. ಕುಶಾಲ (ಸುಳ್ಯ):- ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಕಣಿಯನ್:ಬಿಲ್ಯಾಯ ಪಂಗಡವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಗ್ಗೆ ಅರ್ಜಿಯನ್ನು ಸಭೆಯ ಮುಂದೆ ಒಪ್ಪಿಸುತ್ತೇನೆ.

ಅಧ್ಯಕ್ಷರು:- ಅರ್ಜಿಯನ್ನೊಪ್ಪಿಸಲಾಯಿತು.

ಶ್ರೀ ಬಿ.ಎಂ. ಇದಿನಬ್ಬ (ಉಲ್ಲಾಳ):- ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆಯ ಹಲಸಿ ಮಂಡಲ ಪಂಚಾಯಿತಿ ಪ್ರಧಾನರ ಅವ್ಯವಹಾರಗಳ ತನಿಖೆ ಬಗ್ಗೆ ಅರ್ಜಿಯನ್ನು ಸಭೆಯ ಮುಂದೆ ಒಪ್ಪಿಸುತ್ತೇನೆ.

ಅಧ್ಯಕ್ಷರು:- ಮಾನ್ಯ ಕಾಗೋಡು ತಿಮ್ಮಪ್ಪ.....

SRI D.B.CHANDREGOWDA:- On a point of order ಸ್ವಾಮಿ...

ಶ್ರೀ ಡಿ.ಎ. ಚಿನ್ನಪ್ಪ:- ಯಾವುದಕ್ಕೆ ಪಾಯಿಂಟ್ ಆಫ್ ಆರ್ಡರ್? ಅವರು ಏನೂ ಹೇಳೇ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಚಿನ್ನಪ್ಪನವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಏತಕ್ಕೆ ಇಷ್ಟು ಆತುರವಾಗಿದ್ದಾರೆ?

ಶ್ರೀ ಡಿ.ಎ. ಚಿನ್ನಪ್ಪ:- ಅವರು ಮಾತನಾಡಲೇ ಇಲ್ಲ.

ಅಧ್ಯಕ್ಷರು:- ಚಂದ್ರೇಗೌಡರೇ ಅವರು ಅಧ್ಯಕ್ಷರೇ ಎಂದು ಹೇಳಲಿ, ಆಮೇಲೆ ನೀವು ಪಾಯಿಂಟ್ ಆಫ್ ಆರ್ಡರ್ ಎತ್ತಿ.

ಶ್ರೀ ಡಿ.ಬಿ. ಚಂದ್ರೇಗೌಡಃ- ಅವರು ಪ್ರಸ್ತಾಪ ಮಾಡಿದಮೇಲೆ ನನ್ನದು ಪಾಯಿಂಟ್ ಆಫ್ ಆರ್ಡರ್ ಏನಿರುತ್ತದೆ? ಅವರು ಸೆಂಟೆನ್ಸ್ ಹೇಳಿದಮೇಲೆ ನನ್ನ ಪಾಯಿಂಟ್ ಆಫ್ ಆರ್ಡರ್ ಇಲ್ಲ. ಇಲ್ಲಿ ನಾನು ಏನು ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ, 68ನೇ ನಿಯಮದ ಮೇರೆಗೆ ಚರ್ಚೆಯನ್ನು ಪ್ರಾರಂಭಿಸುವ ಮುಂಚೆ ಈ ಸಭೆಯಲ್ಲಿ ತಾವು ಒಂದು ಮಾತು ಕೊಟ್ಟಿದ್ದಿರಿ. ಈ ಚರ್ಚೆಯನ್ನು ಆರಂಭಿಸುವುದಕ್ಕೆ ಮುಂಚೆ ನಾನು, ಸಭಾನಾಯಕರು ಮತ್ತು ವಿರೋಧಪಕ್ಷದ ನಾಯಕರನ್ನು ಕರೆದು ಚರ್ಚೆ ಮಾಡಿ ಸಮಯ ಮತ್ತು ದಿನವನ್ನು ನಿಗದಿ ಮಾಡುತ್ತೇನೆ ಎಂದು ಹೇಳಿದ್ದಿರಿ. ನಿನ್ನೆ ಕೂಡ ತಮ್ಮ ಛೇಂಬರ್‌ಗೆ ನಾನು ಬಂದೆ. ಆಗಲೂ ಸಮಯ ನಿಗದಿ ಮಾಡತಕ್ಕ ವಿಚಾರ ಹೇಳಲಿಲ್ಲ. ಅಲ್ಲಿ ಏನು ನಡೆಯಿತ್ತಿತ್ತು ಆ ಪ್ರಸ್ತಾಪ ಬೇರೆ. ಕನಿಷ್ಟ ಸೌಜನ್ಯದ ದೃಷ್ಟಿಯಿಂದ ಆ ಅವಕಾಶವನ್ನು ನಮಗೆ ಕಲ್ಪಿಸಿಕೊಡಬೇಕಾಗಿತ್ತು. ಹೇಗೋ ತೀರ್ಮಾನ ತೆಗೆದುಕೊಂಡಿದ್ದೀರಿ. ಅದು ಒಂದು, ಎರಡನೆಯದು, ನಿಯಮ 68ರ ಪ್ರಕಾರ ನಮ್ಮದು ಒಂದು ವಿಚಾರ ನಾಲ್ಕನೇ ಬಾರಿ ಬರುತ್ತಿದೆ. ಅದು "Regarding distribution of sites by acquiring land in survey No.........." ಈ ವಿಷಯ ಒಂದು ಸಾರಿ ಮಂತ್ರಿಗಳಿಲ್ಲ ಎಂದು ಮುಂದಕ್ಕೆ ಹೋಯಿತು. ಇನ್ನು ಎರಡು ಸಾರಿ ಸದನಕ್ಕೆ ಸಮಯ ಇಲ್ಲ ಎಂದು ಮುಂದಕ್ಕೆ ಹೋಯಿತು. ದುರ್ದೈವ, ಇವತ್ತು ಎರಡನೇ ವಿಚಾರವಾಗಿ ಬಂದಿದೆ. 4ನೇ ಬಾರಿ ಬರುತ್ತಾ ಇರತಕ್ಕ 68ನೇ ನಿಯಮದ ವಿಚಾರ ಇವತ್ತು ಪಟ್ಟಿಯ ಎರಡನೆಯ ಭಾಗದಲ್ಲಿ ಇದೆ. ಇದನ್ನು ನಾನು, ಮಾನ್ಯ ಪಿ.ಜಿ.ಆರ್.ಸಿಂಧ್ಯಾ ಮತ್ತು ಏಕಾಂತಯ್ಯನವರು ಪ್ರಸ್ತಾಪಿಸಿದ್ದೇವೆ. ಇದರಲ್ಲಿ ಎರಡು ಅಭಿಪ್ರಾಯವನ್ನು ಜನ ರೂಪಿಸಿಕೊಳ್ಳಬಹುದು. ಪ್ರತಿಪಕ್ಷದವರು ವಿಷಯ ಪತ್ರಿಕೆಯಲ್ಲಿ ದಿನಾ ಬರಲಿ, ಇವರಿಗೆ ಚರ್ಚೆ ಮಾಡುವುದಕ್ಕೆ ಆಸಕ್ತಿ ಇಲ್ಲವೇನೋ ಎಂಬ ಅಭಿಪ್ರಾಯಕ್ಕೆ ಬಂದು ಸಾರ್ವಜನಿಕರು ಸಂಶಯ ವ್ಯಕ್ತ ಮಾಡುವುದಕ್ಕೆ ಅವರಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಆದ್ದರಿಂದ ಇದು ಮುಂಚೆ ಚರ್ಚೆ ಆಗಬೇಕಾಗಿತ್ತು. ಇದು ಒಂದು ದಿವಸ ಆಗುತ್ತದೋ, ಎರಡು ದಿವಸ ಆಗುತ್ತದೋ ಚರ್ಚೆ ಮಾಡುತ್ತೀರೋ ಬಿಡುತ್ತೀರೋ ನನಗೆ ಗೊತ್ತಿಲ್ಲ. ನಾಲ್ಕನೇ ಬಾರಿ ಬರುವ ವಿಷಯಕ್ಕೆ ಪ್ರಾಮುಖ್ಯತೆ ಬೇಕೋ ಬೇಡವೋ? ತಾವು ಈ ಎರಡು ವಿಚಾರದಲ್ಲಿ ಹೇಳಿ. ಆಮೇಲೆ ನಾನು ಹೇಳುತ್ತೇನೆ.

ಅಧ್ಯಕ್ಷರುಃ- ಸದನದ ನಾಯಕರು ಮತ್ತು ವಿರೋಧ ಪಕ್ಷದ ನಾಯಕರೊಡನೆ ಸಮಾಲೋಚನೆ ಮಾಡಿ ನಾನು ಸಮಯ ನಿರ್ಧಾರ ಮಾಡುತ್ತೇನೆಂದು ಹೇಳಿದ್ದೆ. ಅನಂತರ ವರದಿಯ ಕಾಪಿಗಳು ನಮ್ಮ ಕೈಯಲ್ಲಿರಲಿಲ್ಲ, ಕಾಪಿಗಳೆಲ್ಲಾ ಸಿಕ್ಕಿದಮೇಲೆ ಈ ವಿಚಾರವನ್ನು ಈ ದಿವಸ ತೆಗೆದುಕೊಳ್ಳಬೇಕೆಂದು ಸೂಕ್ಷ್ಮವಾಗಿ ನಿಮಗೆ ನಿನ್ನೆ ನಾನು ತಿಳಿಸಿದ್ದೆ. ನೀವು ದೆಹಲಿಗೆ ಹೋಗಬೇಕಾಗಿದೆ ಎಂದು ನನಗೆ ಹೇಳಿದಿರಿ. ಆದ್ದರಿಂದ ಅದಕ್ಕೆ ಮೊದಲು ಮಾಡಬೇಕು ಅಥವಾ ಮುಂದಿನ ಅಧಿವೇಶನದಲ್ಲಿ ಇದನ್ನು ಪ್ರಸ್ತಾಪ ಮಾಡಬೇಕು ಎಂದು ಸೂಕ್ಷ್ಮವಾಗಿ ನಿನ್ನೆ ವಿಚಾರ ಮಾಡಿದ್ದೆ. ಮಾಡುವುದಾದರೆ ಇವತ್ತು ದೆಹಲಿಗೆ ಹೋಗುವ ಮುನ್ನ ಮಾಡಿ ಮುಗಿಸಿ ಎಂದು ನೀವು ಅಭಿಪ್ರಾಯ ಕೊಟ್ಟಿರಿ ಎಂದು ನನ್ನ ತಿಳಿವಳಿಕೆಗೆ ಬಂತು. ನಂತರ ಸಭಾನಾಯಕರ ಜೊತೆ ಮಾತನಾಡಿದೆ. ಸಭಾನಾಯಕರು, ಇವತ್ತಿನ ದಿವಸ ಕೊನೇ ದಿವಸ. ಈ ವರದಿಗಳನ್ನು ವಿಶೇಷ ದೂತರ ಮೂಲಕ ಬೆಂಗಳೂರಿಗೆ ತರಿಸಿ ಅದನ್ನು ಪ್ರಿಂಟ್ ಮಾಡಿಸಿ ಎಲ್ಲಾ ಸದಸ್ಯರಿಗೆ ಹಂಚಿದ್ದೇವೆ, ಆದ್ದರಿಂದ ಇದನ್ನು ಮುಗಿಸಿಬಿಡಬಹುದು ಎಂದು ಅಭಿಪ್ರಾಯಪಟ್ಟರು. ಆದ್ದರಿಂದ ಇದನ್ನು ಸೂಚನೆ ಮಾಡಿದ್ದೇನೆ. ಎರಡನೇ ಪ್ರಸ್ತಾಪ, ಬಳ್ಳಾರಿ ವಿಷಯದ ಬಗ್ಗೆ ಕೆಲವಾರು ದಿವಸದ ಕೆಳಗೆ ಗಮನ ಸೆಳೆಯುವ ಸೂಚನೆಯಾಗಿ ಕೊಟ್ಟಿರಿ. ಒಂದಲ್ಲ ಒಂದು ಕಾರಣದಿಂದ ಅದು ಬರಲಿಲ್ಲ. ಬಜೆಟ್ ಅಧಿವೇಶನದಲ್ಲಿ ಈ ತರಹ ಆಗುವುದುಂಟು. ಆದ್ದರಿಂದ ವಿಷಯದ ಪ್ರಾಮುಖ್ಯತೆಯನ್ನು ಗಮನಿಸಿ, ನನ್ನ ಸ್ವಂತ ಡಿಸ್ಕ್ರಿಷನನ್ನು ಉಪಯೋಗಿಸಿ ನಾನು 68ನೇ ನಿಯಮದ ಪ್ರಕಾರ ಎರಡೂ ಚರ್ಚೆ ನಡೆಯಬೇಕು, ಮೊದಲು ಅದು ಚರ್ಚೆ ನಡೆಯಲಿ, ನಂತರ ಇದು ಚರ್ಚೆ ನಡೆಯಲಿ ಎಂದು ತೀರ್ಮಾನ ಮಾಡಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:- ನನ್ನ ಪ್ರಶ್ನೆಗೆ ಉತ್ತರ ಸಿಕ್ಕಲಿಲ್ಲ. ನನ್ನ ಪ್ರಶ್ನೆ ಇದ್ದದ್ದು ಏನೆಂದರೆ, ಪ್ರತಿ ದಿವಸವೂ ಇದು ಕೊನೆಯ ಸಬ್ಜೆಕ್ಟ್ ಆಗಿ ಏಕೆ ಬರುತ್ತದೆ? ಅವತ್ತು 68ರ ನಿಯಮದಡಿಯಲ್ಲಿ ಇದನ್ನು ತಂದಾಗ ತಾವೇ ಇದನ್ನು ಕನ್ವರ್ಟ್ ಮಾಡಿದರೂ, ಎರಡನೆಯದಾಗಿ ಬರುತ್ತದೆ? ಇದು ಮೊದಲನೆಯದಾಗಿ ಬರುತ್ತದೆ. ಇಲ್ಲಿ ನಾನು ಶಂಕೆಯನ್ನು ವ್ಯಕ್ತ ಮಾಡುತ್ತೇನೆ. ಇದೇ 68ರ ನಿಯಮದಡಿಯಲ್ಲಿ ಚರ್ಚೆಯನ್ನು ಪ್ರಾರಂಭಿಸುವುದಾದರೆ, ನನ್ನ ಅಭಿಪ್ರಾಯವನ್ನು ಮೊದಲು ತಾವು ಕೇಳಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು:- ಯಾರದ್ದು?

ಶ್ರೀ ಡಿ.ಬಿ. ಚಂದ್ರೇಗೌಡ:- 68ರ ನಿಯಮದಡಿಯಲ್ಲಿ ಕಾಗೋಡು ತಿಮ್ಮಪ್ಪನವರು ಹಾಗೂ ಶ್ರೀ ಮಲ್ಲಿಕಾರ್ಜುನಖರ್ಗೆಯವರು ಕಳುಹಿಸಿದ್ದಾರಲ್ಲಾ, ಅದನ್ನು ಮೊದಲು ಚರ್ಚೆಗೆ ತೆಗೆದುಕೊಳ್ಳಬೇಕೆಂಬುದು ತಮ್ಮ ನಿರ್ಣಯವಾದರೆ ನಾನು ನನ್ನ ಅಭಿಪ್ರಾಯವನ್ನು ಹೇಳಬೇಕಾಗುತ್ತದೆ.

ಅಧ್ಯಕ್ಷರು:- ವಿಚಾರದ ಪ್ರಾಮುಖ್ಯತೆಯನ್ನು ಗಮನಿಸಿ, ನನ್ನ ಸ್ವಂತ ಡಿಸ್‌ಕ್ರಿಷನನ್ನು ಉಪಯೋಗಿಸಿ ಅದಕ್ಕೆ ಮೊದಲ ಸ್ಥಾನವನ್ನು ಕೊಟ್ಟಿದ್ದೇನೆಂದು ಹೇಳಿದ್ದೇನೆ. ಅದರ ಮೇಲೆ ನಿಮ್ಮ ಅಭಿಪ್ರಾಯವನ್ನು ಬೇಕಾದರೆ ಹೇಳಿ. ಅದರ ಜೊತೆಗೆ ವಿಚಾರದ ಮಹತ್ವ ಅದಕ್ಕೆ ಜಾಸ್ತಿ ಇದೆಯೋ? ಇದಕ್ಕೆ ಜಾಸ್ತಿ ಇದೆಯೋ ಎಂಬುದನ್ನೂ ತಾವು ಹೇಳಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ:- ವಿಚಾರದ ಮಹತ್ವ ಇದರಲ್ಲಿ ಏಕೆ ಜಾಸ್ತಿ ಇದೆ ಅಂದರೆ, ಅಲ್ಲಿ ಬರೀ ಭೂಮಿಯನ್ನು ತೆಗೆದುಕೊಳ್ಳುವುದಕ್ಕೆ ಸಲಹೆ ಕೊಟ್ಟರು ಎನ್ನುವಂತಹದ್ದೇ ಚರ್ಚೆಯ ವಸ್ತುವಾಗುತ್ತದೆ. ಆದರೆ ಇಲ್ಲಿ ಕೊಟ್ಟ ಭೂಮಿಯನ್ನು 4(1) ಆಗಿ, 6(1) ಆಗಿ ಮಾಲೀಕರಿಗೆ 5 ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಟ್ಟು, 1,49,000-00 ರೂಪಾಯಿಗಳನ್ನು ಲೇ ಔಟ್‌ಗಾಗಿ ಖರ್ಚು ಮಾಡಿ ಸೈಟುಗಳನ್ನು ಹಂಚಿತರತಕ್ಕಂಹದ್ದು ಎರಡನೆಯದು ಎಂದು ತಾವು ತೀರ್ಮಾನಿಸಿದರೆ ಅದನ್ನು ನಾನು ಪ್ರಶ್ನೆ ಮಾಡುವುದಿಲ್ಲ. 68ರ ನಿಯಮದಡಿಯಲ್ಲಿ ಶ್ರೀಮಾನ್ ಕಾಗೋಡು ತಿಮ್ಮಪ್ಪನವರ ವಿಷಯವನ್ನು ಚರ್ಚೆಗೆ ಎತ್ತಿಕೊಳ್ಳಬೇಕೆಂದು ತಾವು ಆದೇಶವನ್ನು ಕೊಡುವುದಾದರೆ, ಅದರ ಬಗ್ಗೆ ನಾನು ನನ್ನ ಅಭಿಪ್ರಾಯವನ್ನು ಹೇಳುತ್ತೇನೆ.

ಅಧ್ಯಕ್ಷರು:- ಶ್ರೀ ಕಾಗೋಡು ತಿಮ್ಮಪ್ಪ...

ಶ್ರೀ ಡಿ.ಬಿ. ಚಂದ್ರೇಗೌಡ:- ಚರ್ಚೆಗೆ ಮುನ್ನ ನನ್ನ ಅಭಿಪ್ರಾಯವನ್ನು ಹೇಳಬೇಕಾಗುತ್ತದೆ. ನನ್ನ ಮತ್ತು ನನ್ನ ಪಕ್ಷದ ಅಭಿಪ್ರಾಯವನ್ನು ಹೇಳಬೇಕಲ್ಲ.

ಶ್ರೀ ವೀರೇಂದ್ರ ಪಾಟೀಲ್:- ನಿಮ್ಮ ಚಾನ್ಸ್ ಬಂದಾಗ ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ:- ಚಾನ್ಸ್ ಬರುವುದು ಬೇರೆ. ಚರ್ಚೆಗೆ ನನ್ನ ಅಭ್ಯಂತರವಿದೆ ಎಂದು ಹೇಳಿದೆ.

ಶ್ರೀ ಬಿ. ಲಕ್ಕಪ್ಪ:- ಮಾನ್ಯ ಅಧ್ಯಕ್ಷರೇ....

ಶ್ರೀ ಡಿ.ಬಿ. ಚಂದ್ರೇಗೌಡ:- ಸುದೈವ ಅವರು ಅಧ್ಯಕ್ಷರು. ದುರ್ದೈವ ನೀವು ಅಲ್ಲ ಎಂದು ಹೇಳಿದೆ. ಅಭಿಪ್ರಾಯವನ್ನು ಇಂಗ್ಲೀಷ್‌ನಲ್ಲಿ ಬರೆದು ಇಟ್ಟಿದ್ದೇನೆ. ಅದಕ್ಕಾಗಿ ತಮ್ಮ ಕ್ಷಮೆ ಕೋರುತ್ತೇವೆ. ಇದು ಬಹಳ ಕ್ಲಿಷ್ಟವಾದ ವಿಚಾರ. ಅದಕ್ಕಾಗಿ ಕನ್ನಡಕ್ಕೆ ತರ್ಜುಮೆ ಮಾಡುವುದಕ್ಕಾಗಲಿಲ್ಲ. ಕನ್ನಡದಲ್ಲಿ ಹೇಳಿದರೂ ಅವರು ಸರಿಯಾಗಿ ಬರೆದುಕೊಳ್ಳುವುದಕ್ಕಾಗಲಿಲ್ಲ; ಟೈಪಿಂಗ್‌ಗೂ ತೊಂದರೆಯಾಯಿತು. ಆದ್ದರಿಂದ ಇಂಗ್ಲೀಷ್‌ನಲ್ಲೇ ನನ್ನ ಮತ್ತು ನನ್ನ ಪಕ್ಷದ ಅಭಿಪ್ರಾಯವನ್ನು ಬರೆದಿದ್ದೇನೆ. ಅದಕ್ಕೆ ತಾವು ಅನುಮತಿಯನ್ನು ಕೊಡಬೇಕು.

"My party has decided not to participate in the Debate on this subject for the following reasons..."

(INTERRUPTION)

HON. MEMBERS:- Point of order...

MR. SPEAKER:- He is quite entitled to make his submission.

SRI. D.B. CHANDREGOWDA: As the leader of the Opposition I have alreadly indicated to this House..

SRI B. SWAMY RAO: Sir..

(INTERRUPTION)

SRI D.B. CHANDREGOWDA: "As the leader of the Opposition I have already indicated to this Hon'ble House of my considered objections to the lack of jurisdiction and propriety of this matter to be debated in this House. I wish to reiterate once again that what the House is doing today is in total violation of Commission of Enquiry Act. That Act prescribes that the Report of the Commission appointed by the Central Government must be presented to the Government and within a fixed time submit to the Government and the Government in turn has placed it in the Library of the Parliament so that it is accessible to every Member. The Houses of Parliament are bound to debate on it during the next Session which is not far away. Under the circumstances this House will be guilty of usurping the jurisdiction of the Central Parliament over a matter exclusively within its jurisdiction. If the Report or the situation arising out of the report has to be fully debated upon, it is inevitable that the selection of the person to head the Commission by the Central Government will have to be considered in all its aspects.."

My Party is firmly of the view that - merely because a Commission of Enquiry is presided over by a Judge of the Supreme Court, the provisions of Article 211 of the Constitution are not attracted. The Supreme Court of India has in the past made this very clear when the Takkur Natarajan Commission was attacked by the Illustrated Weekly of India. The two judges presiding over the Commission had moved the Supreme Court to take action against the Weekly. The Supreme Court had declined to do so on the ground that it was not a contempt of the Supreme Court. Unfortulately, the ruling of the Hon'ble Speaker precludes us from commenting on this very vital aspect of this report. In a country where the confidence of the nation has already been rudely shaken by the action of the Takkur Natarajan and then by the Takkur Commission of enquiring into Mrs.Gandhi's assassination, the manner in which Justice Kuldhip Singh was headed the Commission inspires no confidence whatsoever.

(INTERRUPTION)

SRI M. VEERAPPA MOILY: I rise on a point of order.

MR. SPEAKER: There is a point of order.

(INTERRUPTION)

MR SPEAKER:- I had called the Law Minister. Neither what Mr.Kharge said, nor what Mr.Deshpande said will go into the records. Only the name whom I call upon to speak, only the submissions made by such members will go to the records.

SRI. K.LAKKAPPA:- Sir...

MR. SPEAKER:- not even Mr.Lakkappa. I have not called upon him to speak. I have called upon the Law Minister.

ಶ್ರೀ ಎಂ. ವೀರಪ್ಪ ಮೊಯ್ಲಿ:- ಸನ್ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಸಾಂದರ್ಭಿಕವಾಗಿ ಒಂದು ಹೇಳಿಕೆಯನ್ನು ಮಾಡುತ್ತಿದ್ದಾರೆ. ಅದರಲ್ಲಿ ಎರಡು ವಿಚಾರಗಳನ್ನು ನಾನು ಎತ್ತುವುದಕ್ಕೆ ಇಷ್ಟಪಡುತ್ತೇನೆ. ಒಂದನೆಯದು...

ಶ್ರೀ ಡಿ.ಬಿ. ಚಂದ್ರೇಗೌಡ:- ಕೊನೆಯಲ್ಲಿ ಹೇಳಬಹುದಿತ್ತು.

ಶ್ರೀ ಎಂ. ವೀರಪ್ಪ ಮೊಯ್ಲಿ:- ಅದಕ್ಕೇ ವಿಧಿಬಿಂದು ಎತ್ತಿರುವುದು. ತಾವು ಎಲ್ಲವನ್ನೂ ಓದಿದ ಮೇಲೆ ವಿಧಿಬಿಂದು ಎತ್ತುವುದಕ್ಕೆ ಅವಕಾಶ ಇಲ್ಲ. ಇದು ಮಧ್ಯದಲ್ಲಿ ಬಂದಿದೆ. ತಮ್ಮ ಹೇಳಿಕೆಯಿಂದ ಉದ್ಭವವಾಗಿದೆ. ಇದರಲ್ಲಿ ಎರಡು ವಾದಗಳ ವಿಚಾರದಲ್ಲಿ ನಾನು ವಿಧಿಬಿಂದುವನ್ನು ಎತ್ತುತ್ತಿದ್ದೇನೆ. ಸನ್ಮಾನ್ಯ ಅಧ್ಯಕ್ಷರೇ, ಒಂದನೇ ಭಾಗ ಯಾವುದು ಎಂದರೆ, ನಿಯಮ 68ರ ಪ್ರಕಾರ ಸನ್ಮಾನ್ಯ ಕಾಗೋಡು ತಿಮ್ಮಪ್ಪನವರು ಹಾಗೂ ಸನ್ಮಾನ್ಯ ಸದಸ್ಯರು ಒಂದು ವಿಚಾರವನ್ನು ಇಲ್ಲಿ ಎತ್ತಿದ್ದಾರೆ. ಅವರು ನಿಯಮ 68ರ ಪ್ರಕಾರ ಏನು ಸೂಚನೆ ಕೊಟ್ಟಿದ್ದಾರೆ ಅದನ್ನು ತಾವು ದಯಮಾಡಿ ಪರಾಂಭರಿಸಬೇಕು. ಬಹುಶಃ ವಿರೋಧಪಕ್ಷದ ನಾಯಕರು ದಯಮಾಡಿ ಪರಾಂಬರಿಸಬೇಕು. ಅದರಲ್ಲಿ ಕೋಡ್ ಆಫ್ ದಿ ಸಬ್ಜೆಕ್ಟ್ ಏನಿದೆ ಅದನ್ನು ಬಹುಶಃ ತಾವು ನೋಡಿದರೆ ಈ ಹೇಳಿಕೆಯನ್ನು ಕೊಡುವ ಅವಕಾಶ ಉದ್ಭವವಾಗುತ್ತಾ ಇರಲಿಲ್ಲ. ಈಗ ವರದಿಯ ಬಗ್ಗೆ ಇಲ್ಲಿ ಚರ್ಚೆ ಆಗುತ್ತಾ ಇಲ್ಲ. ವಿರೋಧಪಕ್ಷದ ನಾಯಕರು ಸಮಾಧಾನದಿಂದ ಕೇಳಿದರೆ ನನ್ನ ವಿಧಿಬಿಂದುವನ್ನು ಅವರೇ ಒಪ್ಪುತ್ತಾರೆಂದು ತಿಳಿದುಕೊಂಡಿದ್ದೇವೆ. ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ ತಾವೂ ಕೂಡ ಮೇಲಿನ ಪೀಠದಲ್ಲಿ ರಾರಾಜಿಸಿ ನಮಗೆಲ್ಲಾ ಮಾರ್ಗದರ್ಶನ ನೀಡಿದವರೇ. ತಮ್ಮ ಸ್ಥಾನದಲ್ಲಿ ನಾನಿದ್ದೆ. ತಾವು ಅಧ್ಯಕ್ಷ ಪೀಠದಿಂದ ಆನೇಕ ತೀರ್ಪುಗಳನ್ನು ಕೊಟ್ಟಿದ್ದೀರಿ. ಅದನ್ನು ನಾವು ಪರಿಪಾಲಿಸಿದ್ದೇವೆ. ನಾವು ಆಗ ಅದರ ಪ್ರಕಾರ ನಡೆದುಕೊಂಡಿದ್ದೇವೆ. ಈಗ ಏನಾಗಿದೆ ಎಂದರೆ, ವಿರೋಧಪಕ್ಷದ ನಾಯಕರಾಗಿ ಈ ಹೇಳಿಕೆಯನ್ನು ಕೊಡುತ್ತಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಬಹುಶಃ ಆ ಸದನದವರೆಲ್ಲರೂ ತಿಳಿದುಕೊಂಡಿದ್ದಾರೆ. ಬಹುಶಃ ತಾವು ಹಿಂದಿನ ತಮ್ಮ ಅವತಾರವನ್ನು ಅಂದರೆ ಸ್ಪೀಕರ್‌ರವರ ಅವತಾರವನ್ನು ನೆನೆಸಿ ಆ ಹೇಳಿಕೆ ಕೊಡುತ್ತಿದ್ದೀರೊ....

ಶ್ರೀ ಪಿ.ಜಿ.ಆರ್. ಸಿಂಧ್ಯ:- ಏನು ಪಾಯಿಂಟ್ ಆಫ್ ಆರ್ಡರ್ ಇದೆ? ಅವತಾರ ಏನು ಇದರಲ್ಲಿ? ನಿಮ್ಮದು ಏನು ಅವತಾರ ಈಗ? ನೀವು ವಿರೋಧಪಕ್ಷದ ನಾಯಕರಿಗೆ ಹಿಂದೆ ಅಧ್ಯಕ್ಷ ಸ್ಥಾನದಲ್ಲಿ ಕುಳಿತುಕೊಂಡಾಗ ಒಂದು ಅವತಾರ ಎಂದು ಹೇಳುತ್ತಿದ್ದೀರಿ, ಏನು ಅದು? ನಿಮ್ಮದು ಈಗ ಯಾವ ಅವತಾರ?

SRI R.V.DESHPANDE:- You please use the other word for that.

ಶ್ರೀ ಎಂ. ವೀರಪ್ಪ ಮೊಯಿಲಿ:- ನಾವು ಒಂದೊಂದು ಹಂತದಲ್ಲಿ ಒಂದೊಂದು ಸ್ಥಾನವನ್ನು ಅಲಂಕರಿಸಿದ್ದೇವೆ. ಅದರಲ್ಲಿ ಏನು ತಪ್ಪು ಇದೆ.

ಅಧ್ಯಕ್ಷರು:- ತಾವು ಈ ಪೀಠವನ್ನು ಅಲಂಕರಿಸಿದ್ದಾಗ ಎಂದು ಹೇಳಿ. ಅದಕ್ಕೆ ಅವರು ಮೊದಲು "ರಾರಾಜಿಸುತ್ತಿದ್ದರು" ಎಂದು ಹೇಳಿದರು. ಆಗ ಶ್ರೀಮಾನ್ ಚಂದ್ರೇಗೌಡರು ಆಗ ಇಲ್ಲಿ

ರಾರಾಜಿಸುತ್ತಿದ್ದರು. ಶ್ರೀಮಾನ್ ಮೊಯಿಲಿಯವರು ಅಲ್ಲಿ ರಾರಾಜಿಸುತ್ತಿದ್ದರು, ಈಗ ಇಲ್ಲಿ ಮಂತ್ರಿಯಾಗಿ ರಾರಾಜಿಸುತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿಃ- ಸನ್ಮಾನ್ಯ ಅಧ್ಯಕ್ಷರೆ, ನಿಯಮ 68ರ ಪ್ರಕಾರ....

ಶ್ರೀ ಡಿ.ಬಿ. ಚಂದ್ರೇಗೌಡಃ- ಅವತಾರವನ್ನು ಎತ್ತಬೇಕಾಗುತ್ತದೆ. ಅವತಾರ ಅಂದರೆ ಹೊಸದಾಗಿ ಹುಟ್ಟಿಬರಬೇಕಾಗುತ್ತದೆ. ಇಲ್ಲಿ ಬದುಕಿದ್ದವರೇ ಮಾಡುವುದರಿಂದ ಅವತಾರ ಎಂಬ ಪ್ರಶ್ನೆ ಬರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿಃ- ಹಿಂದೆ ಒಂದು ವೇಷ ಆಗಿತ್ತು. ಈಗ ಇನ್ನೊಂದು ವೇಷ ಆಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡಃ- ಭೂತ ಕುಣಿತವಾದರೆ ವೇಷ, ಇದು ಭೂತ ಕುಣಿತ ಅಲ್ಲವೇ.

ಶ್ರೀ ಎಂ. ವೀರಪ್ಪ ಮೊಯಿಲಿಃ- ನಿಯಮ 68ರ ಪ್ರಕಾರ ಸಾರ್ವಜನಿಕ ಮಹತ್ವದ ಜರೂರಾದ ವಿಚಾರದ ಬಗ್ಗೆ ಚರ್ಚೆ ನಡೆಸಲು ಸೂಚನೆ ಕೊಟ್ಟಿದೆ. ಈಗಲೇ ಚರ್ಚೆಗೆ ತರಬೇಕೆಂಬ ಬಗ್ಗೆ ಮಾರ್ಗದರ್ಶನವಿದೆ. ಬೇರೆ ಅನೇಕ ವಿಚಾರಗಳ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಪಕ್ಷ ನಾಯಕರ ಜೊತೆಯಲ್ಲಿ ಸಮಾಲೋಚನೆ ಮಾಡಿ ಇದನ್ನು ತರಬೇಕೆಂದು ಇದ್ದರೂ ಕೂಡ 69ರ ನಿಯಮವನ್ನು ತಾವು ಪರಿಶೀಲನೆ ಮಾಡಬೇಕಾಗಿದೆ. ಅದರಲ್ಲಿ ಈ ರೀತಿ ಇದೆ.

"ಅಧ್ಯಕ್ಷರು ತಮಗೆ ಅವಶ್ಯವೆಂದು ಕಂಡು ಬರಬಹುದಾಂಥ ವಿವರಗಳನ್ನು ಒದಗಿಸಬೇಕೆಂದು ಸೂಚನೆಯನ್ನು ಕೊಟ್ಟಿರುವ ಸದಸ್ಯರನ್ನೂ ಮತ್ತು ಮಂತ್ರಿಯವರನ್ನೂ ಕೋರಿದ ತರುವಾಯ ಸೂಚನೆಯ ವಿಚಾರವು ಶೀಘ್ರದಲ್ಲಿಯೇ ಸಭೆಯಲ್ಲಿ ಚರ್ಚೆ ನಡೆಸುವಷ್ಟು ಜರೂರು ಮತ್ತು ಸಾಕಷ್ಟು ಮುಖ್ಯವಾದ ವಿಚಾರವಾಗಿದೆ ಎಂದು ಅಧ್ಯಕ್ಷರು ತೃಪ್ತಿ ಹೊಂದಿದರೆ ಸೂಚನೆಯನ್ನು ಅಂಗೀಕರಿಸಬಹುದು ಮತ್ತು ಕಾಲ ನಿರ್ಣಯ ಮಾಡಬಹುದು.

ಅಲ್ಲದೆ ಈ ವಿಚಾರವನ್ನು ಕುರಿತು ಚರ್ಚೆ ನಡೆಸಲು ಬೇಗನೆ ಅವಕಾಶವು ಅನ್ಯರೀತಿಯಲ್ಲಿ ದೊರೆತರೆ, ಸೂಚನೆಯನ್ನು ಅಂಗೀಕರಿಸಲು ನಿರಾಕರಿಸಬಹುದು". ಆದ್ದರಿಂದ ನಿಯಮ 68, 69ರ ಪ್ರಕಾರ ಇದಕ್ಕೆ ಅವಕಾಶ ಕೊಡತಕ್ಕದ್ದು, ತಮ್ಮ ಪರಾಮಾವಧಿ ಅಧಿಕಾರಕ್ಕೆ ಸೇರಿದ್ದು. It is solely your satisfaction. ಅದನ್ನು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಸಮಾಲೋಚನೆ ಮಾಡಬೇಕಾದ ಅವಶ್ಯಕತೆ ಈ 68 ಅಥವಾ 69ರ ನಿಯಮದ ಪ್ರಕಾರ ಬರುವುದಿಲ್ಲ. ಈ ಸೂಚನೆಯನ್ನು ಕೊಟ್ಟ ಮೇಲೆ, ಪ್ರಸ್ತಾವಿಕವಾಗಿ ಆಕ್ಷೇಪಣೆಯನ್ನು ಕೊಟ್ಟಮೇಲೆ ಅದನ್ನೆಲ್ಲ ಕೇಳಿ even that opportunity was given by the Hon'ble Speaker. ತಾವು ಇದಕ್ಕೆ ಅನುಮತಿ ಕೊಟ್ಟಿದ್ದೀರಿ. ಈ ವಿಚಾರದ ಬಗ್ಗೆ ತಾವು ಒಂದು ಕನ್ಸಿಡರ್ಡ್ ತೀರ್ಪನ್ನು ಕೊಟ್ಟಿದ್ದೀರಿ. ತಮ್ಮ ಸ್ಯಾಟಿಸ್‌ಫ್ಯಾಕ್ಷನ್ ಪ್ರಕಾರ, ಇರತಕ್ಕ ನಿಯಮಗಳನ್ನು ಚಲಾಯಿಸಿ ತಾವು ಇದರ ಬಗ್ಗೆ ಅವಕಾಶವನ್ನು ಕೊಟ್ಟು ಎರಡೂ ಕಡೆ ವಾದವನ್ನು ತಾವು ಸ್ವೀಕಾರ ಮಾಡಿದಮೇಲೆ, ತಾವು ತೀರ್ಪು ಕೊಟ್ಟಮೇಲೆ, ಏನು ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಈ ಆಕ್ಷೇಪಣೆಯನ್ನು ಎತ್ತಿದ್ದಾರೆ ಅದು ನಿಯಮ 68ಕ್ಕೆ ವಿರೋಧವಾಗುತ್ತದೆ. ತಮ್ಮ ತೀರ್ಪಿನ ವಿರುದ್ಧವಾಗಿ ವ್ಯಾಖ್ಯಾನ ಮಾಡಿದ ಹಾಗೆ ಆಗುತ್ತದೆ. ತಾವು ಇದಕ್ಕೆ ಅವಕಾಶ ಮಾಡಿಕೊಟ್ಟರೆ ಇದರಿಂದ ಸತ್‌ಪರಂಪರೆಗೆ ವಿರುದ್ಧವಾಗುತ್ತದೆ. ಏತಕ್ಕೆಂದರೆ, ಈ ಹೇಳಿಕೆಯನ್ನು ವಿರೋಧ ಪಕ್ಷದ ನಾಯಕರು ಮಾಡುತ್ತಿದ್ದಾರೆ; that tant amounts to the statement against the judgement given by the Hon'ble Speaker. That statement cannot be permitted. Even if Your goodself has permitted, now, I think that has got to be expunged ನಾಳೆ anybody can raise any statement. ತಾವು ತೀರ್ಪು ಕೊಟ್ಟಮೇಲೆ ಅದರ ಮೇಲೆ ಆಕ್ಷೇಪಣೆ ಎತ್ತಲಿಕ್ಕೆ ಹೇಳಿಕೆ ನೀಡಲಿಕ್ಕೆ ಅವಕಾಶ ಕೊಟ್ಟರೆ ಮುಂದೆ ತಾವು ಕೊಡತಕ್ಕ ಎಲ್ಲಾ ತೀರ್ಪುಗಳ ಮೇಲೆ ವ್ಯಾಖ್ಯಾನ ಮಾಡತಕ್ಕಂಥ ಒಂದು ಅವಕಾಶವನ್ನು ಈ ಸದನದಲ್ಲಿ ಮಾಡಿಕೊಟ್ಟಂತಾಗುತ್ತದೆ. ಬಹುಶಃ ತಮ್ಮ

ತೀರ್ಪಿಗೆ ಒಂದು ಪಾವಿತ್ರ್ಯತೆ ಬರುವುದಿಲ್ಲ. ಈ ಸದನಕ್ಕೂ ಕೂಡ ಪಾವಿತ್ರ್ಯತೆ ಬರುವುದಿಲ್ಲ. ಅವರು ಇದನ್ನು ಪ್ರಶ್ನೆ ಮಾಡುತ್ತಾರೆಂಬುದು ಗೊತ್ತಿರಲಿಲ್ಲ. ಆದಕ್ಕಾಗಿ ಮೊದಲೇ ಆಕ್ಷೇಪಣೆಯನ್ನು ಎತ್ತಲಿಲ್ಲ. ಆದರೆ ಇದು ಅದರ ವ್ಯಾಖ್ಯಾನವಾಗುವುದರಿಂದ ಈ ಸದನದ ಪಾವಿತ್ರ್ಯತೆಗೆ ಸ್ಯಾಂಕ್ಟಿಟಿಗೆ ಹಾಗೂ ತಮ್ಮ ತೀರ್ಪಿಗೆ ಬೆಲೆ ಬರುವುದಿಲ್ಲ. ಏಕೆಂದರೆ ಇವತ್ತು ತಾವು ಇರಬಹುದು. ಹಿಂದೆ ಅವರು ಇದ್ದರು, ಅವರು ಕೂಡ ವಿಚಾರ ಮಾಡಿಕೊಂಡು ಇಂತಹ ಹೇಳಿಕೆಗಳನ್ನು ಹಿಂದಕ್ಕೆ ಕೊಟ್ಟರೆ ಈ ಸದನದ ಪಾವಿತ್ರತೆ ಏನಾಗುತ್ತದೆ ಎನ್ನುವುದು ನನ್ನ ಮೊದಲನೆಯ ಆಕ್ಷೇಪಣೆ. ನಾನು ಮೊದಲೇ ಹೇಳಿದ್ದೇನೆ. ಸನ್ಮಾನ್ಯ ವಿರೋಧಪಕ್ಷದ ನಾಯಕರೂ ಕೂಡ ಆ ಸ್ಥಾನದಲ್ಲಿದ್ದರು. ಅವರು ಆ ಸ್ಥಾನದಲ್ಲಿ ಇರುವಾಗ ಅನೇಕ ಬಾರಿ ನಾವೂ ಕೂಡ ಆವೇಶದಿಂದ ಅನೇಕ ವಿಚಾರಗಳನ್ನು ಎತ್ತಿರಬಹುದು. ಆದರೆ ತಾವೂ ತಡೆ ಮಾಡಿದ್ದೀರಿ. ಏಕೆಂದರೆ ಸಂವಿಧಾನಬದ್ಧವಾಗಿ ನಾವು ಈ ಸದನದಲ್ಲಿ ಕೆಲಸ ಮಾಡಬೇಕಾಗುತ್ತದೆ. ಈ ಸದನ ಸಂವಿಧಾನಬದ್ಧವಾದ ಸಂಸ್ಥೆಯ ಒಂದು ಅಂಗವಾಗಿದೆ. ಆರ್ಟಿಕಲ್ 211ರ ಪ್ರಕಾರ

" No discussion shall take place in the Legislature of a State with respect to the conduct of any judge of the Supreme Court or of a High Court in the discharge of his duties..."

ಅದನ್ನು ಮತ್ತೂ ಉಲ್ಲೇಖನ ಮಾಡುವುದಕ್ಕೆ ಇಚ್ಛೆಪಡುವುದಿಲ್ಲ ಏಕೆಂದರೆ, ನಮ್ಮ ನಿಯಮದ ಪ್ರಕಾರ ಕೂಡ ಅದನ್ನು ಎತ್ತುವುದಕ್ಕೆ ಆಗುವುದಿಲ್ಲ. ಅದರ ಬಗ್ಗೆ ಹೈಕೋರ್ಟ್ ರೂಲಿಂಗ್ ಇದೆ, ಸುಪ್ರೀಂಕೋರ್ಟ್ ರೂಲಿಂಗ್ ಇದೆ. ತಾವು ಕೂಡ ಅದನ್ನು ಹಿಂದೆ ರೂಲ್ 68ರ ಪ್ರಕಾರ ಎತ್ತಿದಾಗ ರೂಲಿಂಗ್ ಕೊಟ್ಟಿದ್ದೀರಿ. ಈ ಬಗ್ಗೆ ಆರ್ಟಿಕಲ್ 211ರ ಪ್ರಕಾರ ಸುಪ್ರೀಂಕೋರ್ಟ್ ಜಡ್ಜ್‌ಮೆಂಟ್ ಬಂದಿದೆ. ಕಮಿಷನ್ ಆಫ್ ಎನ್‌ಕ್ವಾಯರಿ ಆಕ್ಟ್ ಪ್ರಕಾರ ವಿಚಾರಣೆ ಮಾಡಿದರೂ ಕೂಡ he will be deemed to have sincerely discharged his duties as a judge, he is deemed to have functioned as a judge. So, any reflection made either by words or sentences now which is sought to be made by the opposition leader will be violative of Article 211 of the Constitution and the rules framed by us. It is also contrary to the judgement given by the Supreme Court and various other High Courts. Rule 310 says clause (5)

"reflect upon the conduct of person in high authority unless the discussion is based on a substantive motion drawn in proper terms." ಎರಡು ವಿಧಾನದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಏನು ತಮ್ಮ ಹೇಳಿಕೆಯನ್ನು ಮಾಡುತ್ತಿದ್ದಾರೆ, ಅವರು ರಾಜಕೀಯವಾಗಿ ಹೇಳಿಕೆಯನ್ನು ಮಾಡುವುದು ಒಂದು ವಿಧಾನ. ಆದರೆ ಈ ಸದನದಲ್ಲಿ ಮಾತನಾಡುವಾಗ ಸಂವಿಧಾನ ಮತ್ತು ನಿಯಮಗಳ ಚೌಕಟ್ಟಿನೊಳಗೆ ಈ ಸದನದಲ್ಲಿ ಕೆಲವು ಸತ್‌ಸಂಪ್ರದಾಯಗಳನ್ನು ನಾವು ಕಾರ್ಯಾಚರಣೆ ಮಾಡುತ್ತಿದ್ದೇವೆ. ಅದರ ಚೌಕಟ್ಟಿನೊಳಗೆ ಯಾವುದೇ ಹೇಳಿಕೆಯನ್ನು ಅಥವಾ ಚರ್ಚೆಯನ್ನು ಮಾಡತಕ್ಕ ಅವಶ್ಯಕತೆಯಿದೆ. ಅದರ ಬಗ್ಗೆ ತೀರ್ಪನ್ನು ಕೊಡಬೇಕೆಂದು ನಾನು ವಿನಯಪೂರ್ವಕವಾಗಿ ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೆ, ಎರಡನೇ ವಿಚಾರಕ್ಕೆ ಮೊದಲು ಉತ್ತರ ಹೇಳಬೇಕು. ಕಾನೂನು ಮಂತ್ರಿಗಳು ದೊಡ್ಡ ಮನಸ್ಸು ಮಾಡಿ ನಿನ್ನೆ ಅವರ ಸಂಪುಟದ ಸದಸ್ಯರಿಗೆ ಈ ಮಾತನ್ನು ಹೇಳಿದ್ದರೆ ನಾನು ಮೆಚ್ಚಿಕೊಳ್ಳುತ್ತಿದ್ದೆ. ಈಗ ನನಗೆ ಬುದ್ಧಿವಾದ ಹೇಳುವುದಕ್ಕೆ ಹೊರಟಿದ್ದಾರೆ.

ಅಧ್ಯಕ್ಷರು:- ಅದನ್ನು ನಾನು ಹೇಳಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು ಹೇಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್: ನಿಮಗೆ ಬುದ್ಧಿವಾದ ಹೇಳುವುದಕ್ಕೆ ನಾವು ಯಾರು? ರೂಲ್ಸ್ ಪ್ರಕಾರ ಹೀಗಿದೆಯೆಂದು ಹೇಳಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು ಕೂಡ ಸುಪ್ರೀಂಕೋರ್ಟ್ ತೀರ್ಪನ್ನು ಉಲ್ಲೇಖಿಸಿ ಮಾಡಿ ಹೇಳಿದ್ದೇನೆ. ಇಲ್ಲೆಸ್ಟ್ರೆಡ್‌ವೀಕ್ಲಿಯೊಳಗೆ ಠಕ್ಕರ್ ನಟರಾಜ್ ಕಮಿಷನ್ ರಿಪೋರ್ಟ್ ಬಗ್ಗೆ ಹೇಳಿದ್ದಾರೆ. ಬೇಕೆಂದರೆ ಅದರ ಕಾಪಿಗಳನ್ನು ನಿಮಗೆ ತರಿಸಿಕೊಡುತ್ತೇನೆ. ಇಲ್ಲಿ ಮುಖ್ಯವಾಗಿರತಕ್ಕದ್ದು ಕಳುಹಿಸಿರತಕ್ಕ ರೂಲ್ 68ರ ಪ್ರಕಾರ ಚರ್ಚೆಯ ವಿಷಯದ ಮೇಲೆ ನಾನು ಮತ್ತು ನನ್ನ ಪಕ್ಷದ ನಿಲುವನ್ನು ಇಲ್ಲಿ ಹೇಳಬೇಕಾಗುತ್ತದೆ. ಚರ್ಚೆಯಲ್ಲಿ ಪಾಲ್ಗೊಳ್ಳಬೇಕೇ ಅಥವಾ ಬೇಡವೇ ಎನ್ನುವ ತೀರ್ಮಾನವನ್ನು ನಾನು ನನ್ನ ಪಕ್ಷದ ಸದಸ್ಯರು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು:- ನಿಮ್ಮ ಟರ್ಮ್ ಬಂದಾಗ ನೀವು ಹೇಳಿ. ನೀವು ನನ್ನ ರೂಲಿಂಗನ್ನು ಪ್ರಶ್ನೆ ಮಾಡತಕ್ಕ ರೀತಿಯಲ್ಲಿ....

ಶ್ರೀ ಡಿ.ಬಿ. ಚಂದ್ರೇಗೌಡ:- ನನ್ನ ಹೇಳಿಕೆಯನ್ನು ಈ ಸದನದಲ್ಲಿ ಕೊಡುವುದಕ್ಕೆ ಅವಕಾಶವಿದ್ದರೂ ನನ್ನ ಅಭಿಪ್ರಾಯ ಹೇಳುತ್ತೇನೆ. ಅದರಲ್ಲಿ ಯಾವುದು ಸರಿ ಯಾವುದು ತಪ್ಪು ಎನ್ನುವುದನ್ನು ತಾವು ತೆಗೆದುಕೊಳ್ಳಬಹುದು ಅಥವಾ ಬಿಡಬಹುದು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:- ಮಾನ್ಯ ಅಧ್ಯಕ್ಷರೆ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ.

ಅಧ್ಯಕ್ಷರು:- ಮೊದಲು ಅವರದು ಡಿಸೈಡ್ ಮಾಡಬೇಕು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:- ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಇದನ್ನು ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸಿದ್ದೇನೆ. ಅವರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುವುದು ನಿಯಮ 333ರಲ್ಲಿ ಈ ರೀತಿ ಇದೆ, ಅವರು ಆ ಪ್ರಕಾರ ರೈಸ್ ಮಾಡುತ್ತಾರೆ.

Rule 333 says.

(1) A point of order shall relate to the interpretation or enforcement of these rules of such articles of the Constitution as regulate the business of the House and shall raise a question which is within the cognizance of the Speaker.

(2) A point of order may be raised in relation to the business before the House at the moment.

(3) No debate shall be allowed on a point of order but the Speaker may, if he thinkgs fit hear members before giving his decision.

(4) A point of order is not a point of privilege.

(5) A member shall not raise a point of order:

(a) to ask for information, or

(b) to explain his position."

Now, by that statement he is explaining his position, party position. ಆದ್ದರಿಂದ ಈ ಪಾಯಿಂಟ್ ಆರ್ಡರ್‌ನಲ್ಲಿ ಅದಕ್ಕೆ ಅವಕಾಶ ಇಲ್ಲ, ರೂಲ್ 333ರಲ್ಲಿ ಸಬ್‌ಕ್ಲಾಸ್ 4 ಸಬ್‌ರೂಲ್ 6(ಬಿ) ನಲ್ಲಿ ಅವಕಾಶ ಇಲ್ಲ. ಇದರ ಪ್ರಕಾರ ಸ್ಟೇಟ್‌ಮೆಂಟ್ ಮಾಡುವುದಕ್ಕೆ ಅವಕಾಶ ಇಲ್ಲ, ಎಕ್ಸಪ್ಲೇನ್ ಮಾಡುವುದಕ್ಕೆ ಅವಕಾಶ ಇಲ್ಲ. ಇದೇ ರೀತಿ ಸಂಪೂರ್ಣವಾದಂಥ ಸ್ಟೇಟ್‌ಮೆಂಟ್ ಓದುವುದಕ್ಕೆ ಅವಕಾಶ ಮಾಡಿಕೊಟ್ಟರೆ ಏನಾಗುತ್ತದೆ ಎಂದರೆ, ಇದೊಂದು ಪ್ರಿಸಿಡೆಂಟ್ ಆಗುತ್ತದೆ, ಮುಂದೆ ಎಲ್ಲರೂ ಕೂಡ ಸ್ಟೇಟ್‌ಮೆಂಟ್ ಬರೆದುಕೊಂಡು ಓದುವುದಕ್ಕೆ ಪ್ರಾರಂಭವಾಗುತ್ತದೆ. ಆದ್ದರಿಂದ ತಾವು ದಯವಿಟ್ಟು ಇದರ ಬಗ್ಗೆ ಗಮನಕೊಟ್ಟು ತಾವು ರೂಲಿಂಗ್ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:- ನಮ್ಮ ಹಿರಿಯ ಸದಸ್ಯರು ತಪ್ಪು ತಿಳಿದುಕೊಂಡರು ಎಂದು ಕಾಣುತ್ತದೆ. ನಾನು ಪಾಯಿಂಟ್ ಆಫ್ ಆರ್ಡರ್ ತೆಗೆದದ್ದು ಮೊದಲನೆಯದಕ್ಕೆ. ಎರಡನೆಯದು, ಹೇಳಿಕೆ ಮಾಡುವುದಕ್ಕೆ ನನಗೆ ಅವಕಾಶ ಕೊಡಿ ಎಂದು ಕೇಳಿದ್ದೆ....

(ಗೊಂದಲ)

ಶ್ರೀ ಕೆ. ಲಕ್ಕಪ್ಪ:- ಪಾಯಿಂಟ್ ಆಫ್ ಆರ್ಡರ್‌ನಲ್ಲಿ ಹೇಳಿಕೆ ಕೊಡುವ ಹಾಗೆ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ನಾನೇ ಒಪ್ಪಿಕೊಳ್ಳುತ್ತಿದ್ದೇನೆ.

ಶ್ರೀ ಕೆ. ಲಕ್ಕಪ್ಪ:- ಈಗ ಏನಾಗಿದೆ ಎಂದರೆ, ತಾವು ತಮ್ಮ ನಿಲುವನ್ನು ನೇರವಾಗಿ ಹೇಳುವುದಕ್ಕೆ ಮೊದಲು....

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು ಕ್ಲಿಯರ್ ಮಾಡಿಬಿಡುತ್ತೇನೆ. ನೀವು ಕುಳಿತುಕೊಳ್ಳಿ ಸ್ವಾಮಿ, ಐದು ನಿಮಿಷದಲ್ಲಿ ಮುಗಿಸುತ್ತೇನೆ.

ಶ್ರೀ ಕೆ.ಲಕ್ಕಪ್ಪ:- ಈಗ ಅವರು ಹೇಳಿಕೆಯನ್ನು ಕೊಡುವುದಕ್ಕೆ ಕಾನೂನಿನಲ್ಲಿ, ನಮ್ಮ ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿ ಅವಕಾಶ ಇಲ್ಲ. ಜೊತೆಗೆ ಅವರು ಮಾಡಿದಂಥ ಸ್ಟೇಟ್‌ಮೆಂಟ್ ಏನಿದೆ, ಪಾರ್ಲಿಮೆಂಟಿನ ಅಧಿಕಾರವನ್ನೆಲ್ಲ ನಾವು ಇಲ್ಲಿ ದುರುಪಯೋಗ ಮಾಡುತ್ತೇವೆ ಎಂದು ಈ ರೀತಿ ಹೇಳಿಕೆಯನ್ನು ಮಾಡಿರತಕ್ಕದ್ದು ಏನಿದೆ it amounts to casting aspersions on the State Legislature ಮಾನ್ಯ ಅಧ್ಯಕ್ಷರು ತಮ್ಮ ಅಧಿಕಾರದಲ್ಲಿ ತಾವು ಮಾಡಿರತಕ್ಕಂಥ ಆಜ್ಞೆಯಂತೆ ನಿಯಮ 68ರಲ್ಲಿ ಚರ್ಚೆ ನಡೆಯಬೇಕೆಂಬ ವಿಚಾರದಲ್ಲಿ ಅಥವಾ ತಮ್ಮ ಮೇಲೆ ಕೂಡ ಅದು aspersion ಆಗುವ ರೀತಿಯಲ್ಲಿ ಅವರು ಸ್ವಾಭಾವಿಕವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡುತ್ತಿದ್ದಾರೆ. ಇವೆಲ್ಲ ಕೂಡ ನಮ್ಮ ರೆಕಾರ್ಡಿನಲ್ಲಿ ಸ್ಟೇಟ್‌ಮೆಂಟ್ ಆಧಾರದ ಮೇಲೆ ಹೋದರೆ ಅದು ಈ ಹೌಸ್ ಮೇಲೆ ಆಪಾದನೆ ಮಾಡಿದಂತಾಗುತ್ತದೆ. ಆದ್ದರಿಂದ ಸ್ಟೇಟ್‌ಮೆಂಟ್ ಮಾಡುವುದಕ್ಕೆ ಅವಕಾಶ ಇಲ್ಲ. ಅವರು ಪಾರ್ಟಿಸಿಪೇಟ್ ಮಾಡಬಹುದು ಇಲ್ಲದಿದ್ದರೆ ಅವರಿಗೆ ಬೇಕಾದಂಥ ತೀರ್ಮಾನ ಮಾಡಬಹುದು. ಆದರೆ ಈ ವಿಚಾರಗಳನ್ನು ಹೇಳಿಕೆಗಳನ್ನು ಓದಿ ಈ ಒಂದು ಸಭೆಯ ಘನತೆಗೌರವ, ಹಕ್ಕುಬಾಧ್ಯತೆ ಏನಿದೆ, ಅದರ ಬಗ್ಗೆ ಹೇಳಿಕೆ ಕೊಡುವುದಾದರೆ ಅದು ತಪ್ಪಾಗುತ್ತದೆ. ಆದ್ದರಿಂದ ಇದಕ್ಕೆ ತಾವು ನಿರ್ದಿಷ್ಟವಾದ ಅಭಿಪ್ರಾಯವನ್ನು ಕೊಡಬೇಕಾಗುತ್ತದೆ. What Mr. Kharge said is correct.

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು ಹೇಳಬೇಕೋ ಬೇಡವೆ? ಇವರು, ಅನುಭವಿ ಹಿರಿಯ ಸದಸ್ಯರು. ಆದರೆ ದುರ್ದೈವ ಏನೆಂದರೆ, ವಿಷಯ ತಿಳಿದುಕೊಳ್ಳದೆ ವಾದ ಮಾಡುತ್ತಿದ್ದಾರೆ. ಇದು ಒಂದೇ ದುರ್ದೈವ. ಅವರಿಬ್ಬರೂ ಹಿರಿಯ ಸದಸ್ಯರು. ನಾನು ಮೊದಲು ಪಾಯಿಂಟ್ ಆಫ್ ಆರ್ಡರ್ ತೆಗೆದದ್ದು ಎರಡು ವಿಚಾರಗಳ ಮೇಲೆ. ಮೊದಲನೆಯದು....

ಶ್ರೀ ಕೆ. ಲಕ್ಕಪ್ಪ:- ಚಂದ್ರೇಗೌಡರೇ.....

ಶ್ರೀ ಡಿ.ಬಿ. ಚಂದ್ರೇಗೌಡ:- ಹೀಗಾದರೆ ಹೇಗೆ? ಮೊದಲನೆಯದು ಪಾಯಿಂಟ್ ಆಫ್ ಆರ್ಡರ್. ಎರಡನೆಯದು, ಈ ವಿಚಾರದಲ್ಲಿ ಚರ್ಚೆಯಲ್ಲಿ ನಾನು ಪಾಲ್ಗೊಳ್ಳದೇ ಇರುವುದಕ್ಕೆ ಕಾರಣ ಹೇಳುವುದಕ್ಕೆ ಅವಕಾಶ ಕೊಡಿ ಎಂದು ಹೇಳುತ್ತಿದ್ದೇನೆ. ಯಾವುದನ್ನು ಇಟ್ಟುಕೊಳ್ಳಬಹುದು, ಯಾವುದನ್ನು ಬಿಡಬಹುದು ಎಂಬುದು ತಮಗೆ ಸೇರಿದ್ದು. ಹೇಳಿಕೆ ಮಾಡುವುದಕ್ಕೆ ಅವಕಾಶ ಇಲ್ಲವೆಂದು ತಾವು ಅಭಿಪ್ರಾಯ ಕೊಡುವುದಾದರೆ ಅದಕ್ಕೆ ನನ್ನ ತಕರಾರು ಇಲ್ಲವೆಂದು ಹೇಳಿದ್ದೇನೆ. ಈ ಸದನದಲ್ಲಿ ಒಂದು ಮಾನ್ಯತೆ ಪಡೆದ ವಿರೋಧ ಪಕ್ಷದ ನಾಯಕನಿಗೆ ಹೇಳಿಕೆ ಕೊಡುವುದಕ್ಕೆ ಇಲ್ಲವೆಂಬ ಅಭಿಪ್ರಾಯ ಈ ಸದನದ್ದು ಆದರೆ, ಬಹುಮತ ಅಭಿಪ್ರಾಯವೇ, ಈ ಶಕ್ತಿಯೇ ಇಲ್ಲಿ ದೊಡ್ಡದು ಎನ್ನುವುದಾದರೆ ಅದು ಆಗಲಿ. ಇಲ್ಲವೇ ತಮ್ಮ ಡಿಸ್ಕಷನ್‌ನಲ್ಲಿ ನನಗೆ ಹೇಳುವುದಕ್ಕೆ ಅವಕಾಶ ಇದೆ ಎಂದರೆ ನನ್ನ ಅಭಿಪ್ರಾಯ ಹೇಳುತ್ತೇನೆ. ಯಾವುದು ತಪ್ಪೋ ಯಾವುದು ಸರಿಯೋ ತಾವು ತೀರ್ಮಾನ ಮಾಡಿ. ಆದ್ದರಿಂದ ನನ್ನ ಹೇಳಿಕೆಗೆ ಸೀಮಿತವಾಗಿ ಇಷ್ಟು ಹೇಳುತ್ತೇನೆ.

ಶ್ರೀ ಕೆ. ಲಕ್ಕಪ್ಪ:- ನಾವು ಒಪ್ಪುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ಏಕೆ ಒಪ್ಪುವುದಿಲ್ಲ? ದಿನಬೆಳಗಾದರೆ ಮಂತ್ರಿಗಳು ಹೇಳಿಕೆ ಕೊಡುವುದಿಲ್ಲವೇನು? ನಾವು ಹೇಳಿಕೆ ಕೊಡಬಾರದೆ. ಬೆಳಿಗ್ಗೆ ಸಾಯಂಕಾಲ ಮಂತ್ರಿಗಳು ಹೇಳಿಕೆ ಕೊಡುವುದಿಲ್ಲವೇ? What is going on here? Hon'ble Minsiters makes statements. If the Leader of the Opposition makes a statements, what is wrong in it? What is it? I have also done my job as a member in various Houses. At least, I must explain through the Hon'ble Speaker to the public.... My Party is firmly of the opinion that the Commission was appointed by the Government of India to fix....

(INTERRUPTION)

SRI D.B. CHANDREGOWDA:- What is this? Everyday Ministers make statements.

(INTERRUPTION)

MR. SPEAKER:- Would you kindly resume your seats? I call upon Sri. K.H.Ranganath.

ಶ್ರೀ ಕೆ.ಹೆಚ್.ರಂಗನಾಥ್:- ಮಾನ್ಯ ವಿರೋಧಪಕ್ಷ ನಾಯಕರು ಒಂದು ಮಾತು ಆಡಿದರು. What is going on here....ಎಂದರು. ಅಂದರೆ ತಾವು ಇಲ್ಲವೇನೊ, ಈ ಸಭೆ ಇಲ್ಲವೇನೊ ಎನ್ನುವ ರೀತಿ ಆಯಿತು. ನಾನು ಇದನ್ನು ಅವರಿಂದ ಬಯಸಿರಲಿಲ್ಲ. 68-69-70 ಇಷ್ಟೇ ಇವತ್ತಿನ ನಿಯಮಾವಳಿಗಳು, ಅದರ ಪ್ರಕಾರ ಮಾತನಾಡಬೇಕಾಗುತ್ತದೆ. ತಾವು ಅವಕಾಶ ಕೊಟ್ಟ ಮೇಲೆ, ಯಾರು ಮಾತನಾಡಬೇಕೆಂದು ತಾವೇ ಹೇಳುತ್ತೀರಿ. ಅವರಿಗೆ ಹೇಳುವುದಕ್ಕೆ ಅಧಿಕಾರ ಇಲ್ಲವೆಂದು ನಾವು ಹೇಳಲಿಲ್ಲ. ಪ್ರಶ್ನೆ ಏನೆಂದರೆ, ಸ್ಟೇಟ್‌ಮೆಂಟ್ ಮಾಡಬಹುದೇ, ಪೂರ್ವಬಾವಿಯಾಗಿ ಸ್ಟೇಟ್‌ಮೆಂಟ್ ಮಾಡಬಹುದೇ? ಮತ್ತು ಅವರು ಒಂದು ಪ್ರಶ್ನೆಯನ್ನು ಹೇಳಿದರು. ಸರ್ಕಾರದವರು, ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುವುದಾದರೆ, ನಾವು ಏಕೆ ಮಾಡಬಾರದು ಎಂದು. ತಾವು ಮಾಡುವುದಾದರೆ, ಹೇಳಿಕೆ ಕೊಡುವುದಾದರೆ ಪೂರ್ವಬಾವಿಯಾಗಿ ಸ್ಪೀಕರ್ ಅವರನ್ನು ಕೇಳು, ಅವರ ಅನುಮತಿ ಪಡೆದು ಮಾಡಬೇಕಾಗುತ್ತದೆ. ನಾವು 68,69,70ರ ನಿಯಮಗಳನ್ನು ಪಾಲನೆ ಮಾಡಬಹುದೇ ವಿನಹ, 71-72-73 ನಿಯಮಗಳನ್ನು ಪಾಲನೆ ಮಾಡುವುದಕ್ಕೆ ಬರುವುದಿಲ್ಲ. ಹಾಗೆಯೇ 67, 66ರ ನಿಯಮಗಳನ್ನೂ ಪಾಲನೆ ಮಾಡುವುದಕ್ಕೆ ಬರುವುದಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಉದ್ವೇಗದಲ್ಲಿ ಮಾತನಾಡಿದರೋ ಏನೋ ಗೊತ್ತಿಲ್ಲ. ನಾನು ಅವರನ್ನು ಕೇಳುತ್ತೇನೆ. ಈ ಮಾತನ್ನು ಅವರು ವಾಪಸ್ ತೆಗೆದುಕೊಂಡರೆ, ಸೌಜನ್ಯವಾಗುತ್ತದೆ. ಏಕೆಂದರೆ ಅದು ಕಡತಕ್ಕೆ ಹೋಗುತ್ತದೆ. ಅದು ಹೋಗಬಾರದು. ನಿಯಮಾವಳಿ ಪ್ರಕಾರ, ಸಂಸದೀಯ ವ್ಯವಹಾರಗಳ ಮಂತ್ರಿಗಳೂ ಹೇಳಿದರು. ನಾವು ಕೊಡುವುದು ಅಷ್ಟೇ ಅಲ್ಲ, ಅದಕ್ಕೂ ಒಂದು ಹೆಜ್ಜೆ ಮುಂದೆ ಹೋಗಿ ಪ್ರಾರಂಭ ಮಾಡಿದ್ದೀರಿ, ಡಿಸ್‌ಕಷನ್ ಕೂಡ ಮಾಡಿದ್ದೇವೆ ಎನ್ನುವ ಮಾತನ್ನು ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ನಾವು ನಿಯಮಾವಳಿ ಪ್ರಕಾರ ಅವಕಾಶವನ್ನು ಪಡೆದುಕೊಳ್ಳಬೇಕೇ ವಿನಹ, ಅದಕ್ಕಿಂತ ಹೆಚ್ಚಿನ ಅವಕಾಶ ಪಡೆದುಕೊಳ್ಳುವುದಕ್ಕಾಗುವುದಿಲ್ಲ. ಒಂದುವೇಳೆ ಸ್ಟೇಟ್‌ಮೆಂಟ್ ಮಾಡುವುದಾದರೆ, ನಿಯಮಾವಳಿಯಲ್ಲಿದ್ದರೆ ಮಾಡಬೇಕು, ಇಲ್ಲದೇಹೋದರೆ ತಮ್ಮ ವಿವೇಚನೆಗೆ ಬಿಟ್ಟಿರತಕ್ಕದ್ದು.

MR. SPEAKER:- Mr. Chandregowda, I am posing this to you for your consideration.

ಶ್ರೀ ಎಂ. ವೀರಪ್ಪಮೊಯಿಲಿ:- 68-69ರ ನಿಯಮದ ಪ್ರಕಾರ ಹೇಳಿಕೆ ಮಾಡುವುದಕ್ಕಾಗುವುದಿಲ್ಲ. ಹೇಳಿಕೆ ಮಾಡತಕ್ಕಂಥ ಒಂದು ನಿಯಮ ಇದೆ, ಅದು 315ನೇ ನಿಯಮ.

The question of explanation from a group, individual or a Party, it is provided for under rule 315. It reads thus:

"A member may, with the permission of the speaker make a personal explanation although there no question before the House, but in this case no debatable matter be brought forward, and no debate shall arise."

(ಗೊಂದಲ)

MR. SPEAKER:- Under what rule, you the leader of the opposition asking me to allow you to exercise your right to make a statement.

SRI. D.B.CHANDREGOWDA:- As a Member of the House....

MR. SPEAKER:- I am willing to listen to you afterwards.

ಶ್ರೀ ಡಿ.ಬಿ. ಚಂದ್ರೇಗೌಡ:- 68ನೇ ನಿಯಮದ ಪ್ರಕಾರ, ಚರ್ಚೆಯನ್ನು ಏನು ಪ್ರಾರಂಭ ಮಾಡಿದ್ದೇವೆ, ಈ ಚರ್ಚೆಯಲ್ಲಿ ನಾನು ಪಾಲ್ಗೊಳ್ಳುವುದಿಲ್ಲ ಎಂದು ಹೇಳತಕ್ಕಂಥ ಸ್ವಾತಂತ್ರ್ಯವನ್ನು ನನಗೆ ಕೊಡಬೇಕೆಂದು ತಮ್ಮನ್ನು ಕೇಳುತ್ತೇನೆ. ತಾವು ಹೇಳಿದ ಮೇಲೆ ನಾನು ಪ್ರಾರಂಭ ಮಾಡಿದೆ. ಅರ್ಧ ಭಾಗಕ್ಕೆ ಬಂದ ಮೇಲೆ ಪಾಯಿಂಟ್ ಆಫ್ ಆರ್ಡರ್ ಬಂತು. ನಾನು ತಮ್ಮಲ್ಲಿ ಪ್ರಾರಂಭದಲ್ಲೇ ಕೇಳಿದೆ, ನಾನು ನನ್ನ ಅಭಿಪ್ರಾಯವನ್ನು ಕ್ರೋಢೀಕರಿಸಿ, ಹೇಳಿಕೆ ರೂಪದಲ್ಲಿ ಇಟ್ಟಿದ್ದೇನೆ, ಅದನ್ನು ಓದುತ್ತೇನೆ. ಆ ಮೇಲೆ ನಾನು ಏನು ಮಾಡಬೇಕೆಂದು ತಾವು ಹೇಳುತ್ತೀರಿ. ಏತಕ್ಕೆ ಪಾರ್ಟಿಸಿಪೇಟ್ ಮಾಡುವುದಿಲ್ಲ ಎಂದು ಹೇಳುವುದಕ್ಕೇನು? ಬಾಯಲ್ಲಿ ಹೇಳಬೇಕೆಂದರೆ ಅದನ್ನೇ ಹೇಳುತ್ತಿದ್ದೆ. ಆದರೆ ಇಲ್ಲಿ ನನ್ನ ಅಭಿಪ್ರಾಯ ವಿಭಿನ್ನವಾಗಿ ಹೋಗಬಾರದೆಂಬ ದೃಷ್ಟಿಯಿಂದ, ಚದುರಿ ಹೋಗಬಾರದೆಂಬ ದೃಷ್ಟಿಯಿಂದ ಕ್ರೋಢೀಕರಿಸಿ ಹೇಳುತ್ತೇನೆ.

ಅಧ್ಯಕ್ಷರು: 68ನೇ ವಿಧಿನಿಯಮದ ಪ್ರಕಾರ ಚರ್ಚೆ ಪ್ರಾರಂಭ ಮಾಡಿದ ಮೇಲೆ ನಿಮ್ಮ ಸರದಿ ಬಂದಾಗ ನೀವು ಹೇಳಬೇಕಾದ ಎಲ್ಲಾ ವಿಚಾರಗಳನ್ನು ಹೇಳುವುದಕ್ಕೆ ನಿಮಗೆ ಸಂಪೂರ್ಣವಾದ ಅವಕಾಶ ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಪಾಲ್ಗೊಳ್ಳುವುದಕ್ಕೆ ಸಿದ್ಧನಿಲ್ಲ ಎಂದು ಹೇಳಬಾರದೆ? That stand of the Party, I must explain.

ಅಧ್ಯಕ್ಷರು:- ಆ ಅವಕಾಶ ತೆಗೆದುಕೊಂಡು ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ:- 68ನೇ ನಿಯಮದ ಪ್ರಕಾರ ಚರ್ಚೆ ಮಾಡುವುದಕ್ಕೆ ನಾನು ಸಿದ್ಧ ಇಲ್ಲ, ಕಾರಣವೇನೆಂದು ಹೇಳಬಾರದೆ.

ಅಧ್ಯಕ್ಷರು:- 68ನೇ ವಿಧಿ ನಿಯಮದ ಪ್ರಕಾರ ಚರ್ಚೆಯಲ್ಲಿ ಪಾಲ್ಗೊಳ್ಳುವುದಕ್ಕೆ ನಾನು ಸಿದ್ಧನಾಗಿಲ್ಲ ಎಂದು ಒಂದೇ ಸೆಂಟೆನ್ಸ್‌ನಲ್ಲಿ ಹೇಳಿಬಿಡಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ:- ಕಾರಣ ಹೇಳುವುದು ಬೇಡವೇ?

MR. SPEAKER:- When your turns come, before that in the vaccum, you cannot, I have permitted Sri. Kagodu Thimmappa.

ಶ್ರೀ ಡಿ.ಬಿ. ಚಂದ್ರೇಗೌಡ:- ಪರ್ಮಿಷನ್ ಕೊಟ್ಟುಬಿಟ್ಟಿದ್ದೀರಿ.

ಅಧ್ಯಕ್ಷರು:- ಪರ್ಮಿಷನ್ ಕೊಟ್ಟಿದ್ದೆ, ಪಾಯಿಂಟ್ ಆಫ್ ಆರ್ಡರ್ ಬಂತು Now, as a Speaker, should I uphold the point of order or reject the point of order.

Well, what am I to do? I have got to exercise my mind. In all good faith, I allowed the Hon.Leader of the Opposition to make a statement. But the Hon.Minister for Law and the Hon.Minister for Education have pointed out certin rules which do not provide for a statement of the kind that you intend making or attempting to make. I have to apply my mind to that.

ಶ್ರೀ. ಪಿ.ಜಿ.ಆರ್. ಸಿಂಧ್ಯ:- ಎಕ್ಸ್‌ಪ್ಲನೇಷನ್ ಮಾಡುತ್ತಾರೆ. ಸ್ಟೇಟ್‌ಮೆಂಟ್ ಬೇಡ ಎಕ್ಸ್‌ಪ್ಲೈನ್ ಮಾಡುತ್ತಾರೆ.

MR. SPEAKER:- Explanatory Statement - What objection do you have?

(INTERRUPTION)

ಶ್ರೀ ಪಿ.ಜಿ.ಆರ್. ಸಿಂಧ್ಯ:- ಒಂದು ನಿಮಿಷ ಮೊಯಿಲಿಯವರೇ ತಮ್ಮ ತೀರ್ಪನ್ನು ನಾವು ಕೊಶ್ಚನ್ ಮಾಡುತ್ತಿಲ್ಲ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಿಮಗಲ್ಲ ನಾನು ಹೇಳಬೇಕಾಗಿರುವುದು, ಅಧ್ಯಕ್ಷರಿಗೆ ಹೇಳಬೇಕು. ಅಧ್ಯಕ್ಷರೇ, ತಾವು ನನ್ನ ಮಾತನ್ನು ದಯವಿಟ್ಟು ಕೇಳಿ. ತಾವು ಏನು ತೀರ್ಮಾನ ಕೊಡುತ್ತೀರಿ, ಆ ತೀರ್ಮಾನವನ್ನು ನಾವು ಒಪ್ಪಿಕೊಳ್ಳುತ್ತೇವೆ. ಅದನ್ನು ಕೊಶ್ಚನ್ ಮಾಡಿ. ತಮ್ಮ ಹತ್ತಿರ ಬಂದು, ತಮ್ಮ ಮೈಕನ್ನು ಮುರಿದು ಹೋಗತಕ್ಕಂಥ ಸಂಪ್ರದಾಯದವರು ನಾವಂತೂ ಅಲ್ಲ. ನೀವು ಸ್ಟೇಟ್‌ಮೆಂಟ್ ಬೇಡ ಎಂದು ತೀರ್ಮಾನ ಕೊಡುವುದಾದರೆ ನಾವು ಆಚೆಗೆ ಹೋಗಬೇಕಾಗುತ್ತದೆ. ಅದಲ್ಲ ಪ್ರಶ್ನೆ, ನಾವು ಆ ಅವತಾರವನ್ನು.......

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ನೀವು ಏತಕ್ಕೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತೀರಿ?

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಮಗೆ ನಿಮ್ಮ ಬಗ್ಗೆ ವಿಶೇಷವಾಗಿ ಬಹಳ ಗೌರವ ಇದೆ. ಯಾರು ಯಾರು ಯಾವ ಯಾವ ಸ್ಥಾನದಲ್ಲಿ ಕುಳಿತುಕೊಂಡು, ಯಾವ ಯಾವ ಅವತಾರಗಳನ್ನು ತಾಳಿ ಅಥವಾ ವೇಷ ಭೂಷಣಗಳನ್ನು ಹಾಕಿಕೊಂಡು ಮಾತನಾಡಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಮುಖ್ಯವಾಗಿರತಕ್ಕಂಥಾದ್ದು ನಾನು ಪದೇ ಪದೇ ಹೇಳುತ್ತಿದ್ದೇನೆ, ನಮ್ಮ ನಾಯಕರು ಇದ್ದಾರೆ. ಈ ರೂಲ್ 68ರ ಪ್ರಕಾರ ತಾವೇನು ಅವಕಾಶ ಕೊಟ್ಟಿದ್ದೀರಿ, ನಾವು ಕೆಲವು ವಿಚಾರಗಳನ್ನು ಹೇಳುವುದಿದೆ. ಆದ್ದರಿಂದ ತಾವು ದಯವಿಟ್ಟು ನಮಗೆ ಅವಕಾಶ ಮಾಡಿಕೊಡಿ. ಏಕೆ ಎನ್ನುವುದನ್ನು ನಾನು ಹೇಳುತ್ತೇನೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾನು ನಿಮಗಲ್ಲ ಉತ್ತರ ಕೊಡಬೇಕಾಗಿರುವುದು. ಮಾನ್ಯ ಅಧ್ಯಕ್ಷರು ಕೇಳಿದ್ದಾರೆ, ಅವರಿಗೆ ಹೇಳಬೇಕಾಗಿದೆ. ನನಗೆ ತಿಳುವಳಿಕೆ ಇಲ್ಲ. ಮಾನ್ಯ ಅಧ್ಯಕ್ಷರಿಂದ ತೆಗೆದುಕೊಳ್ಳಬೇಕಾಗಿದೆ. ಅಧ್ಯಕ್ಷರೇ ಇವತ್ತು ನಮ್ಮ ಬಾಯಿಗೆ ಬೀಗ ಬಿದ್ದಿದೆ. ಈಗ ಏನಾಗಿದೆಯೆಂದರೆ The situation arising out of the report by Hon'ble Justice Kuldip Singh. ಎನ್ನತಕ್ಕಂಥ ವಿಚಾರ ಇದೆ. ಇದು ಆದಮೇಲೆ ಏನಾಗಿದೆ, ಸಿಚ್ಯುಯೇಷನ್ ಏನು ಆರೈಸ್ ಆಗಿದೆ. ಯುದ್ಧ ಆಗಿದೆಯೋ? What is the situation.

ಅಧ್ಯಕ್ಷರು:- ಅದನ್ನು ಅವರನ್ನು ಕೇಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅದನ್ನೇ ನಾನು ಹೇಳುವುದಕ್ಕೆ ಹೊರಟಿದ್ದೇನೆ. what is the situation,Therefore, if somebody has to say what is the situation has arisen, we have to refer it to the report of the Kuldip Singh Commission. Without referring to the report, it is not possible. ಮಾನ್ಯ ಅಧ್ಯಕ್ಷರೇ, ಇದೇ ಸಂದರ್ಭದಲ್ಲಿ ಮತ್ತೊಂದು ಮಾತನ್ನು ನಾನು ಹೇಳುತ್ತಿದ್ದೇನೆ. ಇಡೀ ಜಗತ್ತಿಗೆ ಕುಲದೀಪ್ ಸಿಂಗ್ ಕಮಿಷನ್ ವರದಿಯಲ್ಲಿ ಏನಿದೆ, ಏನು ಬಂದಿದೆ ಎಂಬುದು ಗೊತ್ತಿದೆ. ಇದು ಇಡೀ ಪ್ರಪಂಚಕ್ಕೆ ಗೊತ್ತಾಗಿದೆ. ಎಷ್ಟು ಜಮೀನನ್ನು ಅಮೇರಿಕಾದಲ್ಲಿರತಕ್ಕಂಥ ವಿದೇಶಿಯರಿಗೆ ಕೊಟ್ಟುಬಿಟ್ಟಿದ್ದಾರೆ, ಎಷ್ಟು ಹಣ ಹೊರಟುಹೋಗಿದೆ...

(ಗೊಂದಲ)

AN HON. MEMBER :- Sir, he is going to debate.

ಅಧ್ಯಕ್ಷರು:- ಡಿಬೇಟ್‌ಗೆ ಹೋಗುತ್ತಿದ್ದೀರಿ.

SRI P.G.R. SCINDIA:- I am not going to debate. ಮಾನ್ಯ ಅಧ್ಯಕ್ಷರೇ, ಏಕೆಂದರೆ ಇವತ್ತು ಇಡೀ ದೇಶದಲ್ಲಿರತಕ್ಕಂಥ ಪ್ರಜಾಪ್ರಭುತ್ವದ ವ್ಯವಸ್ಥೆ ತಮ್ಮ ಕಡೆ ನೋಡುತ್ತಿದೆ. ಈ ಸದನದಲ್ಲಿ ಆಗತಕ್ಕಂಥ ಚರ್ಚೆ ಏನು ಇದೆ ಅದನ್ನು ಇಡೀ ದೇಶ ನೋಡುತ್ತಿದೆ. ಅವರಿಗೆ ಇದು ಅರ್ಥವಾಗದಿದ್ದರೆ ನನಗೇನು ಸಂಬಂಧ ಇಲ್ಲ. ನನ್ನ ದೃಷ್ಟಿಯಲ್ಲಿ ನಾನು ಹೇಳುತ್ತಿದ್ದೇನೆ. What is the situation which has arisen? ನನ್ನ ಅಭಿಪ್ರಾಯದಲ್ಲಿ ಇದನ್ನು ನಾನು ಹೇಳುತ್ತಿದ್ದೇನೆ. There is nothing. The only thing is....

SRI. A.K. ANANTHAKRISHNA :- That can be explained.

SRI. P.G.R. SCINDIA:- Mr. Hegde has resigned not from the Membership of this House and not from something else. Is that situation you want to discuss? ಒಂದೇ ಒಂದು ಅವರಿಗೆ ಇರುವುದು, ಆದೇನೆಂದರೆ ಸುತ್ತಾಮುತ್ತಾ ಎಲ್ಲಾ ಕಡೆಯಿಂದ ಹೆಗಡೆಯವರನ್ನು ಬೈಯಬೇಕು. ಅದು ಒಂದೇ ಒಂದು ತಾನೆ ಇರುವುದು.

ಒಬ್ಬ ಮಾನ್ಯ ಸದಸ್ಯರು:- ನಿಮಗೆ ಏತಕ್ಕೆ ಇಷ್ಟೊಂದು ಹೆದರಿಕೆ?

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:- ತಾವು ಇದನ್ನು ಕೇಳಬೇಕು.....

(ಗೊಂದಲ)

MR. SPEAKER:- In a situation like this, there could be honest differences of opinion.

SRI. P.G.R. SINDIA:- I am coming to that. I honestly feel that I have all respect for the Chair and yourself.

ನೀವು ಈ ಸದನದಿಂದ ಆಚೆ ಹೋಗಿ ಎಂದು ಹೇಳಿದರೂ ಕೂಡ ನಾವು ಬರುತ್ತೇವೆ. ನಮಗೆ ನೀವು reprimand ಮಾಡಿದರೂ ಪರವಾಗಿಲ್ಲ. ತಾವು ಏನೂ ಬೇಕಾದರೂ ಶಿಕ್ಷೆ ಕೊಡಿ. ನಿಮ್ಮ ಬಗ್ಗೆ ನಮಗೆ ಬಹಳ ಗೌರವ ಇದೆ. ಆದರೆ ಮಾನ್ಯ ಅಧ್ಯಕ್ಷರೇ, I again repeat. I am not questioning your judgement or ruling. But the point is, what is it to refer to Kuldip Singh Commission. We cannot speak about Judge. We cannot speak about his findings. There is other provision to discuss about his findings. The moment he becomes the Chairman of the Commission, he shall not be a

judge. The moment he becomes the Commission, it can be discussed and it has been discussed.

ಆದರೆ ಇರತಕ್ಕಂಥಾದ್ದು ಏನು? ಈಗ ನನಗೆ ಜಸ್ಟೀಸ್ ಕುಲದೀಪ್‌ಸಿಂಗ್ ಬಗ್ಗೆ ಮತ್ತು ಸುಪ್ರೀಂಕೋರ್ಟ್ ನ್ಯಾಯಾಧೀಶರ ಬಗ್ಗೆ ಬಹಳ ಗೌರವ ಇದೆ.

MR. SPEAKER:- When a Judge of the High Court or the Supreme Court, sits as an Enquiry Commission, he does not deem its office as Judge.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ಎ.ಐ.ಆರ್ 1978 ಸುಪ್ರೀಂ ಕೋರ್ಟ್ ಪ್ಯಾರಾ 52ರಲ್ಲಿ ಏನು ಇದೆ ಎಂದರೆ:

"The reports as findings are not immune from criticism if they are either not fair or impartial or even unsatisfactory for other reasons."

This is the finding of the Supreme Court.

MR. SPEAKER:- This House is not bound by what the Supreme Court says. This House has got its own rules.

(INTERRUPTION)

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಬಸವಲಿಂಗಪ್ಪನವರು ನಿನ್ನೆ ಹೈಕೋರ್ಟ್ ಬಗ್ಗೆ ಏನು ಹೇಳಿದರುಎನ್ನುವುದು ಗೊತ್ತಿದೆ. ಮಾನ್ಯ ಅಧ್ಯಕ್ಷರು ನನಗೆ ಪರ್ಮಿಷನ್ ಕೊಟ್ಟಿದ್ದಾರೆ. ನಾನು ಈಲ್ಡ್ ಆಗುವುದಿಲ್ಲ.....

(INTERRUPTION)

MR. SPEAKER:- Mr. Scindia please resume your seat. This House is not particularly concerned about what the Supreme Court has ruled or what the High Court has ruled. This House is concerned with the Constitution on the one hand and with the Rules of Procedure of this House on the other hand.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಈಗ ಕಾನ್‌ಸ್ಟಿಟ್ಯೂಶನ್‌ನಲ್ಲಿರುವ ಪ್ರಾವಿಜನ್ ಪ್ರಕಾರ ನಮಗೇನು ಆಗುತ್ತಿದೆ. Sir, I am coming to Constitution. If at all, according to me there is no situation which has arisen.

MR. SPEAKER:- That is a matter of opinion.

SRI. P.G.R. SCINDIA:- Even if the Zero situation has to be discussed, there are parameters. What are the parameters? We cannot discuss about the Judge, discuss about findings of the Inquiry Commission. Then, what is to be discussed?

MR. SPEAKER:- We will know from Sri. Kagodu Thimmappa.

SRI. P.G.R. SCINDIA:- We protest for any kind of discussion.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ, ನಾನು ಹೇಳಿಕೆ ಕೊಡುವುದಕ್ಕೆ ಅವಕಾಶ ಕೊಡುವುದಿಲ್ಲವೇ? ಈ ಸದನದಲ್ಲಿ ನನ್ನ ಅಭಿಪ್ರಾಯ ಹೇಳುವಂತಹ ಸ್ವಾತಂತ್ರ್ಯ ಇಲ್ಲವೇ?

SRI. M. VEERAPPA MOILY:- Why are you afraid?

(ಗೊಂದಲ)

ಅಧ್ಯಕ್ಷರು:- ಮಾನ್ಯ ಸದಸ್ಯರಾದ ಸಿಂಧ್ಯರವರು ಹೇಳಿದರಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ನನ್ನ ಅರ್ಧ ಹೇಳಿಕೆ ಆದ ಮೇಲೆ....

(INTERRUPTION)

RULING PARTY MEMBERS: Shame, Shame, Shame.

SRI. R.V. DESHPANDE:- Sir, we have got highest respect for you and your ruling.

(INTERRUPTION)

SRI. D.B. CHANDREGOWDA:- What is truth?

SRI. R.V. DESHPANDE:- Sir, we have highest respect for you and the Chair. Now, the Hon.Leader of the Opposition, on behalf of the Party wants to give explanation which does not mean that we have objection to the discussion which is yet to start. What is the point to be discussed?

(INTERRUPTION)

SRI. R.V. DESHPANDE:- Sir, if they do not want to hear, I will not say. Sir, what is the point?

MR. SPEAKER:- You please yield to Sri. Kagodu Thimmappa. Let us see what he says.

(INTERRUPTION)

MR. SPEAKER:- Let us hear Sri Kagodu Thimappa. It is a very peculiar situation. When the Chair has allowed the discussion under rule 68, the Hon.Leader of the Opposition is trying to exercise or trying to assert his right to make a statement. Am I right factually?

MEMEBERS ON THE OPPOSITION:- Yes Sir.

MR. SPEAKER: Do you have any amendment?

SRI D.B. CHANDREGOWDA: You call it a Statement or a codified form of opinion.

MR. SPEAKER: Codified form of opinion...When I gave the ruling the other day, the Hon.Leader of the Opposition had his say. When once, rightly or wrongly, when the Speaker gives ruling admitting a motion and then it has found a place in the agenda of the business. Therefore, all of us are bound by the agenda or the order paper of the day. In the order paper of the day, the first discussion under rule 68 is the one which is going to be raised by Sri. Kagodu Thimmappa. So, I have called upon Mr. Kagodu Thimmappa to initiate the discussion. If the Hon.Leader of the opposition has to make a statement on this very subject, he certainly can do so, when once the Motion is formally moved by Sri. Kagodu Thimmappa. I cannot allow any further discussion on my ruling. If you are still insisting on it, you are questioning my ruling.

MEMBERS OF THE OPPOSITION:- We are not questioning.

MR. SPEAKER:- When the Motion is moved, you can have your say. Let the Motion be moved.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಅಧ್ಯಕ್ಷರೇ, ಬೆಂಗಳೂರಿನ ಹೊಸೂರು ಸರ್ಜಾಪುರದ 110 ಎಕರೆ ಜಾಗವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅನಿವಾಸಿ ಭಾರತೀಯರಿಗೆ ಮಂಜೂರು ಮಾಡಿದ ಹಿನ್ನೆಲೆಯಲ್ಲಿ ನಡೆಸಲಾದ ನ್ಯಾಯಮೂರ್ತಿ ಕುಲದೀಪ್ ಸಿಂಗ್ ವಿಚಾರಣಾ ಆಯೋಗದ ತೀರ್ಪಿನಿಂದ ಉದ್ಭವಿಸಿರುವ ಪರಿಸ್ಥಿತಿಯ ಬಗ್ಗೆ ಚರ್ಚಿಸುವ ವಿಷಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ನಾನು ಪ್ರಾರ್ಥನೆ ಮಾಡಿದೆ.....

MR. SPEAKER:- He has initiated the discussion. Now you can have your say.

(INTERRUPTION)

MR. SPEAKER:- Let us hear him. His preliminary objections to your..

SRI D.B. CHANDREGOWDA:- While continuing...while the first volume of the report...

(INTERRUPTION)

SRI D.B. CHANDREGOWDA:- He has permitted me. You cannot question the Speaker's ruling. While the first volume of the report....

(INTERRUPTION)

SRI D.B. CHANDREGOWDA:- No intelligent debate is possible according to my view unless the voluminous evidence....

(INTERRUPTION)

MR. SPEAKER:- Mr. Chandre Gowda, the Education Minister has raised a point of order. The education Minister.

(INTERRUPTION)

MR. SPEAKER :- Education Minister...

ಶ್ರೀ ಕೆ.ಹೆಚ್. ರಂಗನಾಥ್:- ಮಾನ್ಯ ಅಧ್ಯಕ್ಷರೆ, ತಾವು ಮೋಷನ್ ಮೂವ್ ಮಾಡಿ ಎಂದು ಹೇಳಿದ್ದೀರಿ, ಅವರು Motion move ಮಾಡಿದ್ದಾರೆ.

MR. SPEAKER:- Discussion, not Motion.

SHRI K.H. RANGANATH :- Discussion, I am sorry. ತಾವು ವಿರೋಧಪಕ್ಷದ ನಾಯಕರನ್ನು ಕರೆದಿರಿ. ಆದರೆ ಅವರು ಇಲ್ಲಿ ಸ್ಟೇಟ್‌ಮೆಂಟ್ ಮಾಡಿದರೆ ಅದು ರಿಕಾರ್ಡ್‌ಗೆ ಹೋಗಕೂಡದು. ಏಕೆಂದರೆ ಈ ಸಭೆ ಮಾಡಿರತಕ್ಕಂಥ ರೂಲ್ಸ್ ನಮಗೆ ಹೆಚ್ಚು ಮತ್ತು ಅದನ್ನು ಜಾರಿಗೆ ಕೊಡತಕ್ಕಂಥ ತಾವು ಹೆಚ್ಚೇ ವಿನಹ ಬಾಕಿ ನಮ್ಮೆಲ್ಲರ ಪಾತ್ರ ಬಹಳಷ್ಟು ಕಡಿಮೆ ಎಂದು ಹೇಳಬೇಕಾಗುತ್ತದೆ.

(INTERRUPTION)

MR. SPEAKER :- Let us hear him.

ಶ್ರಿ ಕೆ.ಹೆಚ್ .ರಂಗನಾಥ್:- ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಸ್ಟೇಟ್‌ಮೆಂಟ್ ಮಾಡುತ್ತೇನೆ ಎನ್ನುವ ಅಭಿಪ್ರಾಯ ಇರಬಹುದು. ಆದರೆ ರೂಲ್ಸ್ ಪರ್ಮಿಟ್ ಮಾಡಿದರೆ ಮಾತ್ರ ಅವರು ಸ್ಟೇಟ್‌ಮೆಂಟ್ ಮಾಡಬೇಕಾಗುತ್ತದೆ, ಇಲ್ಲದಿದ್ದರೆ ಮಾಡುವ ಹಾಗಿಲ್ಲ....

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು ಹೇಳಿದ್ದೆ. ಇದು ಸ್ಟೇಟ್‌ಮೆಂಟ್ ಅಲ್ಲ, ಇದು ಕೋಡಿಫೈಡ್ ಒಪೀನಿಯನ್ ಎಂದು.

(INTERRUPTION)

MR. SPEAKER :- Let us have some intelligent discussion here. Let us try to understand each other.

ಶ್ರೀ ಕೆ.ಹೆಚ್. ರಂಗನಾಥ್:- ನಾವು ಏನು ನಿಯಮಾವಳಿಗಳನ್ನು ಮಾಡಿದ್ದೇವೆ, ಆ ನಿಯಮಾವಳಿಗಳನ್ನು ನಾವೇ ಗಾಳಿಗೆ ತೂರುವುದೇ? ತೂರುವುದಾದರೆ ಅದಕ್ಕೆ ಅವಕಾಶವನ್ನು ಕೊಡಕೂಡದು. ಹಾಗೆ ಅಂಥ ಅವಕಾಶವನ್ನು ಯಾರೂ ಕೇಳಲೂ ಕೂಡದು. ನಾವು 1971ರಿಂದ ನೋಡಿದರೆ ಎಲ್ಲಿಯೂ ಕೂಡ ವಿರೋಧಿ ಪಕ್ಷದ ನಾಯಕರಿಗೆ ಅಷ್ಟೇ ಅಲ್ಲ, ನಾಯಕರಿಗೂ, ಬೇರೆ ಸದಸ್ಯರಿಗೂ ಎಲ್ಲಿಯೂ ಇಂಥ ಹಕ್ಕು ಬರುವುದಿಲ್ಲ. ಒಂದು ವೇಳೆ ಪ್ರಸ್ತಾಪ ಮಾಡಿದಾಗ ನಾಯಕರಿಗಾಗಲೀ, ಮಂತ್ರಿಗಳಿಗಾಗಲೀ ಹೇಳುವುದಕ್ಕೆ ಅವಕಾಶ ಇದೆ. ನಮಗೆ ಅಧಿಕಾರ ಇದೆ ಎಂದು ಹೇಳಿ ಇಡೀ ಸದನದ ಅಧಿಕಾರವನ್ನು ಒಬ್ಬರೇ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಮಾನ್ಯ ವಿರೋಧಿಪಕ್ಷದ ನಾಯಕರು ಇನ್ಸಿಸ್ಟ್ ಮಾಡಿದರೆ ಅದು ಕಡತದಲ್ಲಿ ಹೋಗಕೂಡದು, ಅಷ್ಟೇ ಅಲ್ಲ, ಪತ್ರಿಕೆಗಳಲ್ಲಿಯೂ ಪ್ರಸಿದ್ಧಿ ಪಡೆಯಕೂಡದು.

MR. SPEAKER :- Just a second. If I uphold Shri Ranganath's point of order then naturally the question of either codified opinion or published/printed/typed statement does not arise at all.

Let us hear Smt. Nagarathnamma, the former Speaker. I certainly would like to be guided by my predecessor who happens to be present in the House. Now I had the benefit of advice from my learned predecessor Shri Ranganath also.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ:- ಮಾನ್ಯ ಅಧ್ಯಕ್ಷರೇ, ತಾವು ನನ್ನನ್ನು ಇಕ್ಕಟ್ಟಿನ ಪರಿಸ್ಥಿತಿಗೆ ಸಿಕ್ಕಿಸಿದಿರಿ.

ಶ್ರೀ ಕೆ.ಹೆಚ್. ರಂಗನಾಥ್:- ಇದು ಇಕ್ಕಟ್ಟಿನ ಪ್ರಶ್ನೆ ಅಲ್ಲ.

ಶ್ರೀಮತಿ ಕೆ.ಎಸ್.ನಾಗರತ್ನಮ್ಮ:- "ಇಕ್ಕಟ್ಟು" ಎನ್ನುವ ಪ್ರಶ್ನೆ ಅಲ್ಲ. ಮಾನ್ಯ ರಂಗನಾಥ್‌ರವರು..

(ಗೊಂದಲ)

ಶ್ರೀ ಕೆ.ಹೆಚ್. ರಂಗನಾಥ್:- ಈ ಸದನ ಏನು ಸಂಪ್ರದಾಯವನ್ನು ಮಾಡಿರುತ್ತದೋ ಅದರ ಬಗ್ಗೆ....

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಶ್ರೀಮತಿ ನಾಗರತ್ನಮ್ಮನವರು ಕೂಡಾ ಈ ಮನೆಯ ಗೌರವಾನ್ವಿತ ಅಧ್ಯಕ್ಷರಾಗಿದ್ದಂಥವರು. ಅವರ ಅಭಿಪ್ರಾಯವನ್ನು ಹೇಳಲಿಕ್ಕೆ ಬಿಡಿ.

(ಗೊಂದಲ)

ಶ್ರೀಮತಿ ಕೆ.ಎಸ್. ನಾಗರತ್ನಮ್ಮ:- "ಇಕ್ಕಟ್ಟು" ಎಂದು ನಾನು ಏತಕ್ಕೆ ಹೇಳಿದೆ ಎಂದರೆ, ಇದನ್ನೆಲ್ಲಾ ಗಮನಿಸುತ್ತಾ ಕುಳಿತುಕೊಂಡಿರುವವರಿಗೆ ಸ್ಪೀಕರ್‌ರವರು ನನ್ನನ್ನು ನಿಮ್ಮ ಅಭಿಪ್ರಾಯ ಹೇಳಿ ಎಂದು ಹೇಳಿದರಲ್ಲಾ, ಅದಕ್ಕೆ "ಇಕ್ಕಟ್ಟು" ಎಂದು ಹೇಳಿದನೇ ಹೊರತು ಹೆದರಿಕೊಂಡು

ಯಾರಿಗೂ "ಇಕ್ಕಟ್ಟು" ಎಂದು ನಾನು ಹೇಳಲಿಲ್ಲ. ಮಾನ್ಯ ಅಧ್ಯಕ್ಷರೇ, ನಾನು ಶ್ರೀಮಾನ್ ರಂಗನಾಥ್‌ರವರ ಅಭಿಪ್ರಾಯವನ್ನು ಪುಷ್ಟೀಕರಿಸುತ್ತಾ, ನಾವು ಒಂದು ಸಾರಿ ರೂಲಿಂಗನ್ನು ಕೊಟ್ಟಮೇಲೆ, ಡಿಸ್ಕಷನ್‌ಗೆ ತಾವು ಅಲೋ ಮಾಡಿದ ಮೇಲೆ ಅವರು ಆ ಡಿಸ್ಕಷನ್ ಆದಮೇಲೆ ಏನಾದರೂ ಹೇಳುವುದು ಇದ್ದರೆ ಹೇಳಬೇಕೇ ಹೊರತು ಮೊದಲೇ ಹೇಳುವುದರಲ್ಲಿ ಯಾವ ತರಹದ ನ್ಯಾಯವೂ ಇಲ್ಲ. ಅದನ್ನು ಹೇಳಲೂಬಾರದು ಎಂದು ನನ್ನ ಕಟ್ಟುನಿಟ್ಟಾದ ಅಭಿಪ್ರಾಯ.

MR. SPEAKER :- I would like to hear Shri Bannikod.

ಶ್ರೀ ಬಿ.ಹೆಚ್. ಬನ್ನಿಕೋಡ್:- ಈಗ ಶ್ರೀಮತಿ ನಾಗರತ್ನಮ್ಮನವರು ಹೇಳಿದ ಅಭಿಪ್ರಾಯವನ್ನು ನಾವೆಲ್ಲರೂ ಗಮನಿಸಿದ್ದೇವೆ. ತಾವು ಇಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಚರ್ಚೆಯನ್ನು ಇನಿಸಿಯೇಟ್ ಮಾಡಿರಿ ಎಂದು ಹೇಳಿದಿರಿ, ಅವರು ಚರ್ಚೆ ಪ್ರಾರಂಭ ಮಾಡಿದ್ದಾರೆ. ಚರ್ಚೆ ಪ್ರಾರಂಭವಾಗಿದೆ, ಅವರಿಗೆ ಅವಕಾಶವನ್ನು ಕೊಟ್ಟಿದ್ದೀರಿ, ನಮ್ಮ ಹೇಳಿಕೆಯನ್ನು ನಾವು ವಿರೋಧ ಪಕ್ಷದವರು ಕೊಡಲಿಕ್ಕೆ ನಮಗೂ ಹಕ್ಕು ಇದೆ ಎನ್ನುವ ಮಾತನ್ನು ಪ್ರತಿಪಾದನೆ ಮಾಡಿದರೆ ಅದಕ್ಕಾಗಿ ನಮ್ಮ ಹೇಳಿಕೆಯನ್ನು ಮುಂದುವರೆಸುವುದಕ್ಕೆ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು:- ಇದು ಬಹಳ ಹೊತ್ತು ಚರ್ಚೆ ನಡೆದಿದೆ. ನಿಯಮ 68, 69, 70 ಈ ಮೂರು ನನ್ನ ಮೇಲೆ ಬೈಂಡಿಂಗ್. ಆದುದರಿಂದ ಮಾನ್ಯ ಕಾಗೋಡು ತಿಮ್ಮಪ್ಪನವರು ಅವರ ಭಾಷಣ ಮುಗಿಸುವವರೆಗೆ ಕೂಡಾ ನಾನು ಯಾವ ಹೇಳಿಕೆಗೂ ಅವಕಾಶ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ತಾವು ಅನುಮತಿಯನ್ನು ಕೊಟ್ಟು.....

(ಗೊಂದಲ)

MR. SPEAKER :- Yes. I will come to that. The Speaker, when he realises that what he has done is a mistake, I own that mistake.

SRI R.V. DESHPANDE:- Your ruling which you have given earlier...

MR. SPEAKER :- I have not given. Mr.Deshpande, I have not given the ruling. Could you resume your seat please?

I have not given the ruling.

ನಾನು ನಿಮಗೆ ಅವಕಾಶಕ್ಕಾಗಿ ಕರೆದೆ. ಈ ಮಧ್ಯೆ ಪಾಯಿಂಟ್ ಆಫ್ ಆರ್ಡರ್ ಬಂತು. ಸ್ಪೀಕರ್ ಆ ಪಾಯಿಂಟ್ ಆಫ್ ಆರ್ಡರ್ ಗಮನಿಸಿ, ಯೋಚಿಸಿ, ಅಭ್ಯಾಸ ಮಾಡಿ ಅನಂತರ ರೂಲಿಂಗನ್ನು ಕೊಡಬೇಕು. ನಾನು ಈಗ ರೂಲಿಂಗನ್ನು ಕೊಡುತ್ತಿದ್ದೇನೆ. ಆ ಪಾಯಿಂಟ್ ಆಫ್ ಆರ್ಡರನ್ನು ಎತ್ತಿ ಹಿಡಿಯುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ:- ದಯವಿಟ್ಟು ತಾವು ತಪ್ಪು ತಿಳಿದುಕೊಳ್ಳಬಾರದು. ತಾವು ಹೇಳಿದಿರಿ, ಅವರು ಡಿಸ್ಕಷನ್‌ನ್ನು ಶುರು ಮಾಡಲಿ, ಇಮ್ಮೀಡಿಯೇಟ್‌ಲಿ ನಿಮಗೆ ಅವಕಾಶ ಕೊಡುತ್ತೇನೆ ಎಂದು ಹೇಳಿದಿರಿ, "You make a statement". He started making the statement.

ಅಧ್ಯಕ್ಷರು :- ಕೊಟ್ಟೆ, ಆದರೆ ಪಾಯಿಂಟ್ ಆಫ್ ಆರ್ಡರ್ ಬಂತು.

(INTERRUPTION)

SRI R.V. DESHPANDE :- I am not going to yield. After that when the Hon'ble Education Minister raised a point of order, what you told Sir, "Now suppose I feel that I have given some wrong decision, I have every right to withdraw it and correct myself." I am saying that, with all respect to you, I would like to convince you that the ruling given earlier in this matter for discussion under Rule 68, it is not a healthy trend.

MR. SPEAKER :- Why do you want to say that I have given a ruling? When I give a ruling, I stand up and give ruling. I just called up Mr.Chandre Gowda to make his preliminary remakrs. I wanted to know whether it is a statement. Then he said it is a codification of his opinion and various other things. I had not permitted him to make his statement. I wanted him to make his preliminary submission and while he was making a statement, a point of order has come.

SRI R.V. DESHPANDE :- That was earlier, Sir. If you had said you had not allowed, I have nothing to say.

For that only before my hon.friend starts discussion, we would like to convince that it will not be a healthy practice to have a discussion and if at all you want to have it you cannot have it. What is the point? The point is.....Mr. Speaker: I know only about this 68.

SRI R.V. DESHPANDE:- The point is regarding the discussion on the situation arising....

MR. SPEAKER:- Then you are coming to my ruling.

SRI R.V. DESHPANDE:- I am not challenging the ruling. Regarding discussion on this point, naturally the Kuldip Singh Commission will be referred to here.

MR. SPEAKER:- I have ruled out that.

SRI R.V. DESHPANDE:- If it is referred, volume II should be here. Volume II is one of the documents.

(INTERRUPTION)

SRI R.V. DESHPANDE:- Suppose I want to comment on the Report, if I want to appreciate the report, volume II should also be before the House. Volume II comprises all the documents. Without that, how could we have discussion? Otherwise if this report was not required, there was no hurry for the Government to bring it from Delhi. They should have brought Volume II also, and supplied us volume II. If you could go through the report - I have gone through the report in the morning - they have quoted certain documents, not fully; some paragraphs of the document. How can I appreciate? What the Hon'ble Commission has said; whether it is wrong or right, to say that volume II is required. Please ask the Government to keep Volume II also before the House.

MR. SPEAKER:- Do you have volume II

(INTERRUPTION)

ಶ್ರೀ ಬಿ.ಹೆಚ್. ಬನ್ನಿಕೋಡ್:- ಈ ನಿರ್ಣಯ ಅಪೂರ್ಣ ಆಗಿದೆ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್:- ನಾವು ಯಾವ ರೀತಿಯಿಂದ ಸಮರ್ಥನೆ ಮಾಡಿಕೊಳ್ಳಬೇಕು.

(ಗೊಂದಲ)

ಶ್ರೀ ಜಿ. ರಾಜೂಗೌಡ:- ನಾವು ವರದಿಯ ಬಗ್ಗೆ ಚರ್ಚೆ ಮಾಡುತ್ತಿಲ್ಲ.

ವಾಲ್ಯೂಂ-2 ಏಕೆ. ಬೇಕು.

ಅಧ್ಯಕ್ಷರು:- ಅದು ಬೇಕು ಎಂದು ಅವರು ಹೇಳಿದ್ದಾರೆ.

ಶ್ರೀ ಜಿ. ರಾಜೂಗೌಡ:- ಅದು ಬೇಕಾಗಿಲ್ಲ. ಏನು ನಮ್ಮ ಹತ್ತಿರ ಸಿಕ್ಕಿದೆ ಅದರ ಬಗ್ಗೆ ಮಾತನಾಡುತ್ತಾ ಇದ್ದೇವೆ.

SRI R.V. DESHPANDE:- Volume I contains the findings of the Commission. Volume II contains the documents which are referred to in volume I as annexures. Without volume II, without the documents, without evidence, what are we going to discuss here except attacking Hegde and politically trying to finish his image?

MR. SPEAKER:- Shri Deshpande has raised a very valid objection that without Volume II you certainly cannot discuss the report. We are not discussing the Report, we are discussing the situation arising out of the report.

(INTERRUPTION)

SRI R.V. DESHPANDE:- Why you have supplied Volume I? Let us throw this report.

(INTERRUPTION)

SRI R.V. DESHPANDE:- Why this report is supplied? Please withdraw. The Government should withdraw this report.

ಶ್ರೀ ಎಂ. ವೀರಪ್ಪಮೊಯಿಲಿ:- ಮಾನ್ಯ ಅಧ್ಯಕ್ಷರೇ, ತಾವು ಪುನಃ ಸನ್ಮಾನ್ಯ ಶಾಸಕರಾದ ಕಾಗೋಡು ತಿಮ್ಮಪ್ಪ ಮತ್ತು ಸಹವರ್ತಿಗಳು ಕೊಟ್ಟಂತಹ ಸೂಚನೆ ಬಗ್ಗೆ ಹೇಳಿದ್ದೀರಿ. ಇಲ್ಲಿ ಸೀಮಿತವಾದಂತಹ ಪ್ರಶ್ನೆ ಏನಂದರೆ, ಇವೊತ್ತು ಚರ್ಚೆ ಆಗುತ್ತಾ ಇರುವುದು, ಕುಲದೀಪ್ ಸಿಂಗ್‌ರವರ ವರದಿಯ ಮೇಲೆ ಚರ್ಚೆ ಅಲ್ಲ; ಚರ್ಚೆ.....

(ಗೊಂದಲ)

SRI R.V. DESHPANDE:- Why you have supplied this? You withdraw this.

SRI M. VEERAPPA MOILY:- I am on my legs.

(INTERRUPTION)

SRI R.V. DESHPANDE:- Please be fair.

(INTERRUPTION)

SRI M. VEERAPPA MOILY:- I will read out. "The discussion on the situation arising after the submission of the report by Justice Kuldip Singh Commission on sanction of 110 Acres of land at Hosur Sarjapur, Bangalore, by the Bangalore Development Authority to the Non-resident Indians." So it is the situation arising after the submission of the report of Justice Kuldip

Singh Commission. ಕುಲದೀಪ್‌ಸಿಂಗ್ ಕಮಿಷನ್ ವರದಿ ಅಲ್ಲಿ ಏನು ಪ್ರಕಟಣೆಯಾಗಿದೆ ಅದು ಸಾರ್ವಜನಿಕರ ವಿಷಯವಾಗಿದೆ ಇವತ್ತು. ಅದರ ಬಗ್ಗೆ ಇವತ್ತು ಚರ್ಚೆ. ಆದುದರಿಂದ ವಾಲ್ಯುಂ-1 ಏಕೆಂದರೆ ತಾವು ಆಪ್ಪಣೆ ಕೊಡಿಸಿದಿರಿ. ಏಕೆಂದರೆ, ಸರ್ಕಾರ ನೇರವಾಗಿ ನಮ್ಮ ಇನಿಷಿಯೇಟೀವ್ ಮೇಲೆ ಇದನ್ನು ಕೊಟ್ಟಿಲ್ಲ, ಪ್ರಿಂಟ್ ಮಾಡಿಲ್ಲ. ಏಕೆಂದರೆ the impression should not go around that we have done it on our own initiative. It is according to the order of the Hon'ble Speaker when notice was given by the parties concerned. Let me put the record straight.

MR. SPEAKER:- I would also like to say; I have said it before and I say it again that when a document of this nature becomes public, the public debate starts.

(INTERRUPTION)

SRI M. VEERAPPA MOILY:- I am on my legs.

SRI R.V. DESHPANDE:- If you have ordered the Government to bring Volume I, I accept. What you said, you wanted Kuldip Singh Commission Report. Kuldip Singh Report consists of two volumes - volume I and II. The Government is trying to make a ...... They know if volume II comes here ಅವರದು ಬೇಳೆ ಎಲ್ಲ ಹೊರಗೆ ಬರುತ್ತದೆ.

(ಗೊಂದಲ)

MR. SPEAKER:- Let us hear Mr. Deshpande. Mr. Deshpande is trying to say that if Volume II is circulated, this Government is going to get exposed.

(INTERRUPTION)

SRI R.V. DESHPANDE:- What I said is....

(INTERRUPTION)

SRI R.V. DESHPANDE: It is the honour of a member and it is the dignity of an individual.

(INTERRUPTION)

MR. SPEAKER:- I might also say that the chair is not interested in who gets exposed.

ಶ್ರೀ ಎಂ. ವೀರಪ್ಪಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಸದಸ್ಯರಾದ ದೇಶಪಾಂಡೆಯವರು ಏನು ಆಕ್ಷೇಪಣೆ ಎತ್ತಿದ್ದಾರೆ, ಅದರ ಬಗ್ಗೆ ಈ ಸರ್ಕಾರದಿಂದ ಸ್ಪಷ್ಟೀಕರಣ ಕೊಡಲಿಕ್ಕೆ ಇಚ್ಛಪಡುತ್ತಾ ಇದ್ದೇವೆ. ತಾವು ತಮ್ಮ ರೂಲಿಂಗ್ ಪ್ರಕಾರ ಆದೇಶ ಕೊಟ್ಟಿದ್ದೀರಿ. ಈ ರಿಪೋರ್ಟನ್ನು ಎಲ್ಲ ಸದಸ್ಯರಿಗೆ ಕೊಡಬೇಕು ಎಂದು ಹೇಳಿದಿರಿ, ಆ ಆಧಾರದ ಮೇಲೆ ನಾವು ಕೊಟ್ಟಿದ್ದೇವೆ. ಇದನ್ನು ಪಬ್ಲಿಕ್ ಮಾಡಿದ್ದು ಏಕೆ, ನಾವು ಕೊಟ್ಟದ್ದು ಏಕೆ ಎಂದರೆ, ನೇರವಾಗಿ ಪ್ರೈಂ ಮಿನಿಸ್ಟರ್ ಹತ್ತಿರ ಕೇಳಬೇಕೇ ಹೊರತು ನಾವು ಉತ್ತರ ಕೊಡಲಿಕ್ಕೆ ಆಗುವುದಿಲ್ಲ. ಸನ್ಮಾನ್ಯ ಅಧ್ಯಕ್ಷರೆ What is important for the discussion? ಅವರು ನೋಟೀಸ್ ಕೊಟ್ಟ ಮೇಲೆ ಅದರ ಶಿಫಾರಸು ಮುಖ್ಯವೋ, ಶಿಫಾರಸು ಇನ್ನೂ Deposition of the witnesses, documents

produced before the Commission, that is not important. ನಮ್ಮ ಸರ್ಕಾರಕ್ಕೆ what is important is, recommendations. Suppose certain recommendations..

(INTERRUPTIONS)

That is for you to... The manner in which the report has been pressed, it is for you to discuss. ನಾನು ಅದನ್ನು ಇಂಟರ್‌ಪ್ರಿಟ್ ಮಾಡಲಿಕ್ಕೆ ತಯಾರಿಲ್ಲ. ಆದರೆ ಪ್ರಶ್ನೆ ಏನೆಂದರೆ, ಸದಸ್ಯರ ಚರ್ಚೆಗೆ ಸೀಮಿತವಾಗಿ ಅನುಕೂಲವಾಗತಕ್ಕಂಥ ಏನು ಶಿಫಾರಸು ಇದೆ ಕುಲದೀಪ್‌ಸಿಂಗ್ ಕಮಿಷನರು ಅದರ ಚರ್ಚೆಗೆ ಅನುಕೂಲವಾಗಲಿ ಎಂದು ಸರ್ಕಾರ ಕೊಟ್ಟಿದೆಯೋ ಹೊರತು ಇದರ ಮೇಲೆ ಬೇರೆ ಉದ್ದೇಶ ನಮ್ಮಲ್ಲಿಲ್ಲ. ಆ ವರದಿ ಶಿಫಾರಸು ಸದಸ್ಯರ ಮುಂದೆ ಇದೆ, ಅದನ್ನು they can take advantage for discussion.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ನಾನು ಒಂದೆರಡು ವಿಚಾರಗಳನ್ನು ತಮ್ಮ ಗಮನಕ್ಕೆ ಮತ್ತು ಸದನದ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ತಾವು ಒಂದು ತೀರ್ಪು ಕೊಟ್ಟಿದ್ದೀರಿ. ತಮಗೂ ಸಹ ಒಂದು ಭಾವನೆ ಬಂದಿರುವ ಹಾಗೆ ಅನ್ನಿಸುತ್ತೆ. ತಮ್ಮ ರೂಲಿಂಗ್‌ನ್ನು ಇವರು ಪ್ರಶ್ನೆ ಮಾಡುವುದಕ್ಕೆ ಹೊರಟಿದ್ದಾರೆಂದು ಭಾವನೆ ಬಂದಿರುವ ಹಾಗೆ ಕಾಣಿಸುತ್ತದೆ, ಖಂಡಿತವಾಗಿಯೂ ಇಲ್ಲ. ನಾವು ಏನು ಪ್ರಯತ್ನ ಮಾಡುತ್ತಿದ್ದೇವೆ ಅಂದರೆ ತಮಗೆ ರೂಲಿಂಗ್ ರಿವೈಸ್ ಮಾಡುವುದಕ್ಕೆ ಅವಕಾಶ ಇದೆ. ತಮ್ಮ ಮನವೊಲಿಸಲಿಕ್ಕೆ ನಾವು ಪ್ರಯತ್ನ ಮಾಡಬಹುದು. ಮತ್ತು ನನಗೆ ನಂಬಿಕೆ ಇದೆ. ತಮ್ಮ ಅಪಾರವಾದ ಅನುಭವದಲ್ಲಿ ಆ ರೀತಿ ತಮ್ಮ ರೂಲಿಂಗ್‌ನಲ್ಲಿ ಇನ್ನೇನಾದರೂ ಸೇರಿಸುವುದಿದ್ದರೆ ಸೇರಿಸಿ, ರಿವೈಸ್ ಮಾಡತಕ್ಕ ಶಕ್ತಿ ಇದೆ; ತಾವು ಮಾಡಿದ್ದೀರಿ, ಮಾಡುತ್ತೀರಿ ಎನ್ನುವ ವಿಶ್ವಾಸ ನನಗೆ ಇದೆ. ಆದ್ದರಿಂದ ದಯವಿಟ್ಟು ತಾವು ಯೋಚನೆ ಮಾಡಿ. ಈಗ ಕೆಲವರು ತಮಗೆ ಏಕೆ ಹೆದರಿಕೆ ಎಂದು ಹೇಳಿದರು. ನಮಗೆ ಯಾವ ಹೆದರಿಕೆಯೂ ಇಲ್ಲ. ಏಕೆ ಹೆದರಿಕೆ ಇಲ್ಲ ಎಂದರೆ, ಕುಲದೀಪ್‌ಸಿಂಗ್ ಆಯೋಗದವರು 110 ಎಕರೆ ಜಮೀನಿನಲ್ಲಿ ನಡೆದಿರತಕ್ಕ...

ಅಧ್ಯಕ್ಷರು:- ನೀವು 110 ಎಕರೆ ವಿಚಾರ ಎತ್ತಿದರೆ, ನಾನು ಕಾಗೋಡು ತಿಮ್ಮಪ್ಪನವರನ್ನು ಕರೆಯಬೇಕಾಗುತ್ತದೆ. ಅದನ್ನು ವಾಪಸ್ಸು ತೆಗೆದುಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ವಾಪಸ್ಸು ತೆಗೆದುಕೊಂಡಿದ್ದೇವೆ. ನಮಗೆ ಹೆದರಿಕೆ ಏನೂ ಇಲ್ಲ. ಒಂದು ಪಕ್ಷ ಅದು ನಡೆದಿದೆ ಎಂದು ಇಟ್ಟುಕೊಳ್ಳೋಣ; ಕುಲದೀಪ್‌ಸಿಂಗ್ ಕಮಿಷನ್‌ನ ತೀರ್ಪುಗಳು ಬಂದಿವೆ, ಇದು ಜಗತ್ತಿಗೇ ಗೊತ್ತಿರತಕ್ಕಂತ ವಿಚಾರ. ಇಲ್ಲಿ ಸದನದಲ್ಲಿ ಚರ್ಚೆಯಾದ ತಕ್ಷಣ, ಹೊಸದಾಗಿ ಯಾವ ಅಂಶದ ಮೇಲೂ ಬೆಳಕು ಚೆಲ್ಲುವುದಕ್ಕಾಗುವುದಿಲ್ಲ. ಚರ್ಚೆಯಾಗಬಾರದೆಂದು ನಾವು ಹೇಳುವುದಿಲ್ಲ. ಚರ್ಚೆಯಾಗಬೇಕು. ನಾವು ಏನು ಕೇಳುತ್ತಿದ್ದೇವೆ ಅಂದರೆ, ನಾನು ಆಗಲೇ ಹೇಳುವುದಕ್ಕೆ ಹೋದೆ ಗದ್ದಲವಾಯಿತು, ಆದರಿಂದ ಹೇಳುವುದಕ್ಕಾಗಲಿಲ್ಲ. ಆಯೋಗ ರಚನೆ ಮಾಡಿದವರು ಕೇಂದ್ರಸರ್ಕಾರದವರು. ಕುಲದೀಪ್‌ಸಿಂಗ್ ಆಯೋಗ ಮತ್ತು ಜಡ್ಜ್ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ತಾವು ರೂಲಿಂಗ್ ನೀಡಿ ನಮ್ಮ ಬಾಯಿಗೆ ಬೀಗ ಹಾಕಿಸಿದ್ದೀರಿ. ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಕುಲದೀಪ ಸಿಂಗ್ ಆಯೋಗದ ರೆಕಮೆಂಡೇಷನ್ ಮೇಲೆ ಯಾರು ಆಕ್ಷನ್ ತೆಗೆದು ಕೊಳ್ಳಬೇಕು, ಕೇಂದ್ರ ಸರ್ಕಾರದವರು ತೆಗೆದುಕೊಳ್ಳಬೇಕು. ಈ ರಾಜ್ಯ ಸರ್ಕಾರಕ್ಕೆ ಅವರು ಸೂಚನೆ ಕೊಡಬಹುದು. ಈ ದೇಶದಲ್ಲಿ ಎಷ್ಟೊಂದು ಕಮಿಷನ್‌ಗಳು ಆಗಿವೆ, ಆಕ್ಷನ್ ಎಷ್ಟು ತೆಗೆದುಕೊಂಡಿದ್ದಾರೆ ಎನ್ನುವುದನ್ನು ನಾವು ನೋಡಿದ್ದೇವೆ. ಇದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಈಗ ಆಕ್ಷನ್ ತೆಗೆದುಕೊಳ್ಳತಕ್ಕ ಕಾಂಪಿಟೆಂಟ್ ಅಥಾರಿಟಿ ಗೌರ್ನಮೆಂಟ್ ಆಫ್ ಇಂಡಿಯಾ. ಈಗ ಸೆಷನ್ ಆಗಿ ಅದನ್ನೂ ಅವರೇನೂ ರಿಜೆಕ್ಟ್ ಮಾಡಿಲ್ಲ; ಇನ್ನೂ ಅದರ ಮುಂದೆ ಇದೆ; ಸದ್ಯದಲ್ಲಿಯೇ ಸೆಷನ್ ಸೇರತಕ್ಕಂಥಾದ್ದಿದೆ. ಅಥವಾ ಈ ಸರ್ಕಾರದವರು 'The situation arisen out of the Kuldip Singh Commission

Report.' ಏನು ಆಕ್ಷನ್ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ. ಏನೂ ಆಕ್ಷನ್ ತೆಗೆದುಕೊಳ್ಳುವಂಥಾದ್ದಿಲ್ಲ. ಇದರ ಬಗ್ಗೆ ರಾಜ್ಯ ಸರ್ಕಾರ ಆಕ್ಷನ್ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಬೇರೆ ಕ್ರಮ ತೆಗೆದುಕೊಳ್ಳಬಹುದು. ನಡೆದಿರತಕ್ಕ ಬಗ್ಗೆ ಆಪಾದನೆ ಏನಿದೆ, ಅದರ ಬಗ್ಗೆ ರಾಜ್ಯಸರ್ಕಾರ ಅಥವಾ ಮಂತ್ರಿಮಂಡಲ ಕ್ರಮ ತೆಗೆದುಕೊಳ್ಳಲಿಕ್ಕೆ, ತಪ್ಪಿತಸ್ಥರನ್ನು ಜೈಲಿಗೆ ಹಾಕಲಿಕ್ಕೆ ಗಲ್ಲಿಗೆ ಏರಿಸಲಿಕ್ಕೆ ಕಾನೂನು ಪ್ರಕಾರ ಅವಕಾಶ ಇದೆ, ಅದನ್ನು ಮಾಡಬಹುದು. ಆದರೆ ಈ ರಿಪೋರ್ಟ್ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಇಂಥ ಸಂದರ್ಭದಲ್ಲಿ ಕಮಿಷನ್ ಬಗ್ಗೆ ತಾವೇ ತಮ್ಮ ರೂಲಿಂಗ್‌ನಲ್ಲಿ ಏನು ಹೇಳಿದ್ದೀರಿ ಅಂದರೆ ತಾವು ಒಂದು ಶಬ್ದ ಉಪಯೋಗಿಸಿದ್ದೀರಿ. "The report of the Commission be pressed into service by the Members while discussing this matter of public importance."

ಶ್ರೀ ಎಸ್. ಬಂಗಾರಪ್ಪ:- ಸಿಂಧ್ಯಾರವರೇ, ನಾನು ನಿಂತ ಮೇಲೆ ನನ್ನ ಪರ್ಮಿಷನ್ ತೆಗೆದುಕೊಂಡು ನೀವು ಭಾಷಣ ಪ್ರಾರಂಭ ಮಾಡಿದಿರಿ. ನನಗೆ ಪ್ಲೀಸ್ ಅಂತೀರಾ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾವು ಏನು ಕೇಳುತ್ತಿದ್ದೇವೆ ಅಂದರೆ ರಿಪೋರ್ಟ್ ಕೊಡಿ ಎಂದು ಕೇಳುತ್ತಿದ್ದೇವೆ. ರಿಪೋರ್ಟ್‌ನ ಒಂದು ಭಾಗ ಕೊಟ್ಟು ಇನ್ನು ಎರಡು - ಮೂರನೆಯ ಭಾಗ ಕೊಡದೇ ಚರ್ಚೆಯಾಗಬೇಕು ಅಂದ ಹೇಗೆ ಆಗುತ್ತದೆ! ಅದೆಲ್ಲಾ ಬರಲಿ, ಕೇಂದ್ರ ಸರ್ಕಾರದವರೂ ತೀರ್ಮಾನ ಮಾಡಲಿ. ಅದಾದಮೇಲೆ ಚರ್ಚೆ ಮಾಡಬಹುದಲ್ಲವೆ. ಅಧ್ಯಕ್ಷರೆ, ತಾವು ದಯವಿಟ್ಟು ವಿಚಾರ ಮಾಡಿ. ತಾವು ತಮ್ಮ ರೂಲಿಂಗ್‌ನ್ನೂ ರಿವೈಸ್ ಮಾಡಿ.

ಶ್ರೀ ಎಸ್.ಬಂಗಾರಪ್ಪ:- ಮಾನ್ಯ ಸಭಾಧ್ಯಕ್ಷರೆ, ಈ ವಿಷಯದ ಬಗ್ಗೆ ಇಷ್ಟೊಂದು ಚರ್ಚೆ ಆವಶ್ಯಕತೆ ಇದೆ ಎಂದು ನಾನು ಭಾವಿಸಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಸ್ವಲ್ಪ ಗಮನಕೊಟ್ಟರೆ ಒಳ್ಳೆಯದು ಎಂದು ನಾನು ಭಾವಿಸಿದ್ದೇನೆ. ನಿಯಮಾವಳಿ 68ರ ಪ್ರಕಾರ.

ಶ್ರೀ ಡಿ.ಬಿ. ಚಂದ್ರೇಗೌಡ:- ಬಹಳ ಹೊತ್ತಾಗಿದೆ, ನೀವು ಲೇಟ್ ಆಗಿ ಬಂದಿರಿ.

ಶ್ರೀ. ಎಸ್. ಬಂಗಾರಪ್ಪ:- ಎಲ್ಲಾ ಮುಗಿಸಿದ್ದೀರಾ, ಎಲ್ಲಾ ಮುಗಿಸಿದ್ದರೂ ಕೂಡ ಇನ್ನೂ ಬಗೆಹರಿಸಿಲ್ಲ ಅಂದರೆ ಇನ್ನು ಯಾವರೀತಿ ಬಗೆಹರಿಸಿರಬಹುದು. ಅದರ ಗಾತ್ರ ಮತ್ತು ವಿವರಗಳಿಗೆ ನಾನು ಹೋಗುವುದಿಲ್ಲ. ನನಗೆ ಗೊತ್ತಿದೆ, ನೀವು ಚರ್ಚೆ ಮಾಡಿದ ವಿವರಗಳನ್ನು ನಾನು ತಿಳಿದುಕೊಂಡಿದ್ದೇನೆ. ಒಟ್ಟು ಇಷ್ಟೇ ಪ್ರಶ್ನೆ. ಈ ವಿಚಾರ ಚರ್ಚೆಗೆ ತೆಗೆದುಕೊಳ್ಳಬೇಕು ಎನ್ನತಕ್ಕದ್ದು. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಆಗಿರಬಹುದು ಅಥವಾ ಬೇರೆ ಎಲ್ಲಿಯೋ ಆಗಿರಲಿ, ಅದರ ಬಗ್ಗೆ ನಾನು ವಿವರಗಳಿಗೆ ಹೋಗುವ ಹಾಗೆ ಇಲ್ಲ. ಬಿಸಿನೆಸ್ ಅಡ್ವೈಸರಿ ಕಮಿಟಿ ಪ್ರೊಸೀಡಿಂಗ್ಸ್ ವಿಚಾರದಲ್ಲಿ ಸದನದಲ್ಲಿ ನಾವು ಓಪನ್ ಆಗಿ ಚರ್ಚೆ ಮಾಡಬಾರದು. ಅಲ್ಲಿಯ ತೀರ್ಮಾನದ ಬಗ್ಗೆ ಚರ್ಚೆ ಮಾಡಬಾರದು. ಸದನಕ್ಕೆ ಮಾತ್ರ ವಿಚಾರಗಳನ್ನು ಅಧ್ಯಕ್ಷರು ಹೇಳತಕ್ಕಂಥಾ ಒಂದು ಪದ್ಧತಿಯನ್ನು ನಾವು ಇಟ್ಟುಕೊಂಡು ಬಂದಿದ್ದೇವೆ. ಆ ದಿವಸ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆ, ಬಿಡಬೇಕೆ ಎನ್ನುವ ವಿಚಾರವನ್ನು ಮಾನ್ಯ ಸಭಾಧ್ಯಕ್ಷರ ತೀರ್ಪಿಗೆ ನಾವೆಲ್ಲಾ ಬಿಟ್ಟು ಆದಮೇಲೆ, ತಾವು ಅಂತಿಮವಾಗಿ ತೀರ್ಪು ಕೊಟ್ಟಿರಿ. ಇವೊತ್ತು ಅಜೆಂಡಾದಲ್ಲಿ ವರದಿಯ ಚರ್ಚೆಯನ್ನೇ ತಾವು ಹಾಕಿಲ್ಲ ತಮ್ಮ ರೂಲಿಂಗ್‌ನ್ನು ಈ ಸಂದರ್ಭದಲ್ಲಿ ನೆನೆಸುತ್ತೇನೆ.ಆವತ್ತು ರೂಲಿಂಗನ್ನು ತಾವು ಓದಬೇಕಾದರೆ ಒಂದು ಪ್ಯಾರಾವನ್ನು ಹೇಳಿ ಮತ್ತೊಂದು ಸಾರಿ ಅದನ್ನು ರಿಪೀಟ್ ಮಾಡಿದ್ದೀರಿ. ಈ ವರದಿಯ ವಿಚಾರವನ್ನು ಚರ್ಚೆಗೆ ಯಾವ ರೂಪದಲ್ಲಿ ತೆಗೆದುಕೊಳ್ಳಬೇಕು ಎನ್ನತಕ್ಕಂಥ ವಿಚಾರ ಹೇಳಬೇಕಾದರೆ, ತಾವು ಒಂದು ಒತ್ತು ಕೊಟ್ಟು ಒಂದು ಮಾತನ್ನು ಹೇಳಿದಿರಿ. ಏನೆಂದರೆ, 'The situation arising out of the report submitted by the Kuldip Singh Commission appointed under the provisions of the Commission of Enquiries Act, 1952, 'if I have understood your ruling correctly. ಸಿಚ್ಯುಯೇಷನ್ ಎನ್ನತಕ್ಕ ಮಾತನ್ನು ಆಡಿದಾಗ ತಾವು ವಿರೋಧಪಕ್ಷದ ನಾಯಕರಾಗಲಿ, ಮತ್ತೊಬ್ಬರಾಗಲಿ, ಸಂಪೂರ್ಣ ವರದಿಯನ್ನು ಚರ್ಚೆಗೆ ತೆಗೆದುಕೊಳ್ಳಬೇಕು ಎನ್ನತಕ್ಕ ಅಭಿಪ್ರಾಯವನ್ನು ಇಟ್ಟು ನೀವು

ವಾದವನ್ನು ಮಾಡಿಬಿಟ್ಟಿದ್ದರೆ, ಆ ಪ್ರಶ್ನೆ ಪ್ರತ್ಯೇಕವಾಗಿರುತ್ತಿತ್ತು. ಹಾಗೆ ವಾದವನ್ನು ಅವರು ಏನಾದರೂ ಇಟ್ಟಿದ್ದರೆ, Volume No. - 1, Volume No.2, Volume No.3. Volume No.I, according to us is the findings or the recommendations of the Commission. Volume No.2 and 3 make reference to the documents or the exhibits. ಅವೆಲ್ಲಾ ಇರತಕ್ಕಂಥ ವಿಚಾರ, ಅದಕ್ಕಾಗಿ ಮಾನ್ಯ ಸಭಾಧ್ಯಕ್ಷರು, ಅವೊತ್ತು ಹೇಳಿದಾಗ, Situation that has arisen out of this report. After the report was submitted to the Government of India.

ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ನಾನು ಇಷ್ಟೇ ಹೇಳುವುದು. ವರದಿಯ ವಿಚಾರವನ್ನು ಚರ್ಚೆಮಾಡಬೇಕು ಎನ್ನತಕ್ಕ ರೂಲಿಂಗ್ ಮಾನ್ಯ ಸಭಾಧ್ಯಕ್ಷರೆ ತಮ್ಮದು ಏನಾದರೂ ಇದ್ದಿದ್ದರೆ, placing on the table of this House all the documents, all the volumes rather Volune No.1, 2 and 3 ಅಥವಾ ಹತ್ತು ಇದ್ದುಕೊಳ್ಳಲಿ, ಇರತಕ್ಕ ಪ್ರಶ್ನೆ ಬರುತ್ತದೆ. That is why he did not press that at that stage. ಮಾನ್ಯ ವಿರೋಧಪಕ್ಷದ ನಾಯಕರು ದಯಮಾಡಿ ಇದಕ್ಕೆ ಗಮನಕೊಡಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ:- ನಾವು ನಿಮ್ಮ ಮುಖ ನೋಡಿಯೇ ಕೇಳಬೇಕು ಅಂದರೆ ಹಾಗೆಯೇ ಮಾಡೋಣ. ನೀವು ಹೇಳುವುದನ್ನು ಬರೆದುಕೊಳ್ಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ:- ಆದ್ದರಿಂದ, ಈ ವರದಿಯ ವಿಚಾರವನ್ನು ಚರ್ಚೆಗೆ ತೆಗೆದು ಕೊಳ್ಳಬೇಕು ಎನ್ನತಕ್ಕ ವಿಚಾರ ಇಲ್ಲದೇ ಇರುವುದರಿಂದ ಅವರಿಂದ ಉದ್ಭವವಾಗಿರತಕ್ಕಂಥ ಪರಿಸ್ಥಿತಿ ಏನಿದೆ, ಅದನ್ನು ಮಾತ್ರ ಚರ್ಚೆ ಮಾಡತಕ್ಕ ವಿಚಾರವನ್ನು ಮಾನ್ಯ ಸಭಾಧ್ಯಕ್ಷರು ಅವರ ತೀರ್ಪಿನಲ್ಲಿ ಹೇಳಿದ್ದರಿಂದ ಅವೊತ್ತು ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಡುವಾಗ ವಾಲ್ಯೂಮ್ ನಂಬರ್ ಒನ್ ಬಗ್ಗೆ ಹೇಳಿದ್ದಾರೆ. ಈಗ ತಾನೆ ದೆಹಲಿಯಿಂದ ಬಂದಿದೆ ಪ್ರಿಂಟ್‌ಮಾಡಿಸಿ ಆದಷ್ಟು ಸಂಜೆಯೊಳಗೆ ವಾಲ್ಯೂಮ್ ಒನ್ ಅನ್ನು ಮಾತ್ರ ಕೊಡುವುದಕ್ಕೆ ಸಾಧ್ಯವಾಗುತ್ತದೆ ಅದನ್ನು ಕೊಡುತ್ತೇವೆ ಎನ್ನತಕ್ಕಂಥ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ವರದಿ ಎಂದು ಹೇಳಿದ್ದಾರೆ 1-2 ವಾಲ್ಯೂಮ್ ಎಂದು ಹೇಳಿಲ್ಲ.

ಶ್ರೀ ಎಸ್. ಬಂಗಾರಪ್ಪ:- ಫೈಂಡಿಂಗ್ಸ್ ಇರತಕ್ಕಂತಹ ಸಂಪೂರ್ಣ ವರದಿ ಬೇಕಿದ್ದರೆ ವಾಲ್ಯೂಮ್ ಒಂದನ್ನು ತೆಗೆದು ಓದಿ ನೋಡಿ ತಮಗೇ ಗೊತ್ತಾಗುತ್ತದೆ. ಅದರಲ್ಲೇ ಫೈಂಡಿಂಗ್ ಇರತಕ್ಕಂಥಾದ್ದು. ಸಂಪೂರ್ಣವಾದ ವರದಿಯನ್ನು ಚರ್ಚೆ ಮಾಡಬೇಕೆಂದರೆ ನೀವು ಹೇಳಿದ ಹಾಗೆ. ಅನೆಕ್ಸರ್ ಇರತಕ್ಕಂಥ ವಾಲ್ಯೂಮ್ 2-3 ಎಲ್ಲಾ ಬರುತ್ತದೆ. ಮಾನ್ಯ ವಿರೋಧಪಕ್ಷದ ನಾಯಕರೂ ಕೂಡ ಅದನ್ನು ಏಕೆ ಪ್ರೆಸ್ ಮಾಡಲಿಲ್ಲವೆಂದರೆ ವರದಿ ಮೇಲೆ ಚರ್ಚೆ ಇಲ್ಲಿ ಇಲ್ಲ ಎನ್ನತಕ್ಕಂತಹ ದೃಷ್ಟಿಯಿಂದ ಪ್ರೆಸ್ ಮಾಡಲಿಲ್ಲ. ಸಿಚ್ಯುಯೇಷನ್ ಮಾತ್ರ ಇರುವುದರಿಂದ ಇಲ್ಲಿ ಬೇರೆ ವಾಲ್ಯೂಮ್‌ಗಳ ಅವಶ್ಯಕತೆ ಇಲ್ಲಿ ಇಲ್ಲ ಎನ್ನತಕ್ಕಂಥ ವಿಚಾರವನ್ನು ಕೂಡ ಅವರು ಆ ದಿವಸ ಮನಗಂಡರು. ತಾವು ರೂಲಿಂಗ್ ಕೊಟ್ಟಾಗ ತಮ್ಮ ಅಭಿಪ್ರಾಯವನ್ನು ನಾವೆಲ್ಲರೂ ಸೇರಿ ಒಪ್ಪಿದ ಹಾಗೆ ಅವರೆಲ್ಲರೂ ಕೂಡ ಒಪ್ಪಿದರು ಎಂದು ತಿಳಿದುಕೊಂಡು ಆ ದಿವಸ ಎದ್ದು ಹೋದೆವು. ದಯಮಾಡಿ ಮಾನ್ಯ ವಿರೋಧಪಕ್ಷದ ನಾಯಕರಾಗಲೀ, ದೇಶಪಾಂಡೆಯವರಾಗಲೀ ಈ ಒತ್ತಡ ಏನು ಮಾಡುತ್ತಿದ್ದಾರೆ ಇದು ಸಲ್ಲದು, ಒಳ್ಳೆಯದಲ್ಲ ಎನ್ನತಕ್ಕದ್ದು ನನ್ನ ಸ್ಪಷ್ಟ ಅಭಿಪ್ರಾಯ. ಕೇಂದ್ರ ಸರಕಾರದ ಅಧಿಕಾರ ಏನು ಇದೆ ಎನ್ನುವುದೂ ನಮಗೆ ಗೊತ್ತು, ರಾಜ್ಯ ಸರಕಾರಕ್ಕೆ ಏನು ಅಧಿಕಾರವಿದೆ ಎಂಬುದೂ ಕೂಡ ಗೊತ್ತು. ಮಾನ್ಯ ಸಿಂಧ್ಯರವರು ಹೇಳಿರತಕ್ಕಂತಹ ವಿಚಾರದ ಬಗ್ಗೆ ಹೇಳುವುದಾದರೆ, ನಿಯಮ 68ರ ಪ್ರಕಾರ ಇದು ಒಂದು ಮೋಷನ್ ಅನ್ನುವಂತಹ ಮಾತನ್ನು ಯಾರೂ ಕೂಡ ಹೇಳಲಿಲ್ಲ, in fact rule 68 makes a reference to a matter only. not a motion. ನಮ್ಮ ಮುಂದೆ ಮೋಷನ್ ಇಲ್ಲ. ಮಾನ್ಯ ಕಾಗೋಡು ತಿಮ್ಮಪ್ಪನವರು ಈಗಾಗಲೇ

ಈ ವಿಚಾರವನ್ನು ಪ್ರಸ್ತಾಪ ಮಾಡಿ ಮುಂದುವರಿಸತಕ್ಕಂತಹವರು ಇದ್ದಾರೆ. ಇಲ್ಲಿರತಕ್ಕಂಥ ವಿಚಾರ ಇಷ್ಟೆ, ವರದಿಯನ್ನು ಕೇಂದ್ರಸರ್ಕಾರಕ್ಕೆ ಕೊಟ್ಟಿದೆ, ಅಂದಮೇಲೆ ರಾಜ್ಯ ಸರಕಾರಕ್ಕೆ ಏನು ಅಧಿಕಾರ ಇದೆ ಎಂಬ ವಿಚಾರವನ್ನು ನಿಯಮ 68ರ ಪ್ರಕಾರ ಚರ್ಚೆಯಾದ ಮೇಲೆ ಹೇಳುವುದಕ್ಕೆ ಬರುತ್ತದೆ. ಈಗ ಪ್ರಿಲಿಮಿನರಿ ಸಬ್‌ಮಿಷನ್ ಎಂದು ತಾವು ಏನು ಹೇಳಿದ್ದೀರಿ ಅದನ್ನು ಅನಂತರ ಕೂಡ ಹೇಳುವುದಕ್ಕೆ ಬರುತ್ತದೆ. ಆದರೆ ಇಲ್ಲಿ ರಾಜ್ಯ ಸರಕಾರ ಯಾವ ರೀತಿ ಅಧಿಕಾರವನ್ನು ಬಳಕೆ ಮಾಡುತ್ತದೆ ಏನು ಮಾಡುತ್ತದೆ ಎನ್ನುವುದು ನಮಗೆ ಗೊತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಅನಂತರ ಹೇಳಿಕೆ ಕೊಡುತ್ತಾರೆ. ತಮ್ಮ ಅಭಿಪ್ರಾಯವನ್ನು ಇಲ್ಲಿ ಹೇಳಲಿಕ್ಕೆ ಹಕ್ಕು ಇದೆ, ದಯಮಾಡಿ ಅನಂತರ ಹೇಳಿ. ಆದರೆ ಈಗ ಉದ್ಭವವಾಗಿರತಕ್ಕಂತಹ ಪರಿಸ್ಥಿತಿಯನ್ನು ವರದಿಯ ಆಧಾರದ ಮೇಲೆ ನಾವು ಚರ್ಚೆ ಮಾಡೋಣ, ನೀವು ಒಪ್ಪಿಗೆ ಕೊಟ್ಟ ಹಾಗೆ, ಒಪ್ಪಿಕೊಂಡ ಹಾಗೆ ಬಿಜಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಮತ್ತು ಇಲ್ಲಿ ರೂಲಿಂಗ್ ಅನ್ನು ಒಪ್ಪಿಕೊಂಡ ಹಾಗೆ ಮಾಡಿ. ಈಗ ಇದಕ್ಕಿಂತ ಬೇರೆ ಏನು ದಾರಿ ತೋರಿಸಿಕೊಡಬೇಕೋ ನಮಗಂತೂ ಗೊತ್ತಿಲ್ಲ. ಇದೆಲ್ಲ ಮುಗಿದು ಬಹಳ ಮುಂದೆ ಹೋದ ಮೇಲೆ ನೀವು ವರದಿಯನ್ನು ಸಂಪೂರ್ಣವಾಗಿ ಇಟ್ಟಿಲವೆಂದು ಹೇಳುತ್ತಿದ್ದೀರಿ. ನನಗೆ ಗೊತ್ತಿರುವ ಹಾಗೆ, ರೂಲಿಂಗ್ ಓದಬೇಕಾದರೆ ಮಾನ್ಯ ದೇಶಪಾಂಡೆಯವರು ಇರಲಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು, ಉಪನಾಯಕರು ಇದ್ದರು, ತಮಗೆ ಗೊತ್ತಿಲ್ಲ. ಆದ್ದರಿಂದ ನೀವು ವರದಿ ವರದಿ ಎಂದು ಹಿಡಿದುಕೊಂಡಿದ್ದೀರಿ. ವರದಿಯ ವಿಚಾರ ಇಲ್ಲ. ವರದಿಯ ಮೇಲೆ ಚರ್ಚೆ ಮಾಡಬೇಕೆಂದು ಇದ್ದರೆ ಆ ಪ್ರಶ್ನೆ ಪ್ರತ್ಯೇಕ. ನಿಯಮ 68ರ ಪ್ರಕಾರ ಇಟ್ಟಿರತಕ್ಕಂತಹ ವಿಚಾರವೇ ಬೇರೆ, ನೀವು ಕೇಳತಕ್ಕಂತಹ ವಿಚಾರವೇ ಬೇರೆ. ಅದು ಇಲ್ಲಿ ಇಲ್ಲವೇ ಇಲ್ಲ. ನೀವು ಕೇಳಿದಿರಿ ಎಂದು ನಾವು ವರದಿಯನ್ನು ಕೊಟ್ಟಿವು.

SRI R.V. DESHAPANDE:- You explain why only this copy was given. You convince the Hon'ble Speaker and the House why only Volume-1 has been given, why not Volume-II.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ:- ನಿಮ್ಮ ಅಭಿಪ್ರಾಯ ಯಾವ ಮಟ್ಟಕ್ಕೆ ಹೋಯಿತು ಎಂಬುದನ್ನು ಹೇಳಬೇಕಾದರೆ, ವಾಲ್ಯೂಮ್ 2-3ಅನ್ನು ಕೊಡಬಾರದೆಂದು ಮುಚ್ಚಿಡುತ್ತಿದ್ದಾರೆ, ಅದನ್ನೇನಾದರೂ ಕೊಟ್ಟರೆ ಇಲ್ಲಿ ಸರಕಾರ ಎಕ್ಸ್‌ಪೋಸ್ ಆಗುತ್ತದೆ ಏನೋ ಎನ್ನುವ ಮಟ್ಟಕ್ಕೆ ತಾವು ಮಾತನಾಡುತ್ತಿದ್ದೀರಿ. ಎಕ್ಸ್‌ಪೋಸ್ ಏನಾದರೂ ಆಗುವುದಿದ್ದರೆ, ಈಗಾಗಲೇ ಯಾರು ಆಗುತ್ತದೆಂದು ಹೇಳಿದರು. ಅವರ ಬಗ್ಗೆ ಇನ್ನೂ ಹೆಚ್ಚು ವಿವರಗಳು ಎಕ್ಸ್‌ಪೋಸ್ ಆಗುತ್ತಾ ಹೋಗುತ್ತದೆ. ಆದರೆ ಸಭಾಧ್ಯಕ್ಷರ ರೂಲಿಂಗ್ ಬೇರೆ ಇರುವುದರಿಂದ ಸರ್ಕಾರ ಅಷ್ಟಕ್ಕೇ ಸೀಮಿತಗೊಳಿಸಿದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಈ ರೀತಿ ಭಾಷಣ ಮಾಡುತ್ತಾ ಹೋಗಬಹುದೇ?

ಅಧ್ಯಕ್ಷರು:- 2 ಗಂಟೆಯಿಂದ ಅದೇ ನಡೆಯುತ್ತಿದೆ. 68ನೇ ವಿಧಿ ನಿಯಮದ ಮೇಲೆ ಭಾಷಣಗಳನ್ನು ಬಿಟ್ಟರೆ ಇನ್ನೇನೂ ಇಲ್ಲ.

ಶ್ರೀ ಎಸ್.ಬಂಗಾರಪ್ಪ:- ಮಾನ್ಯ ವಿರೋಧಪಕ್ಷದ ನಾಯಕರು ನನ್ನದು ಭಾಷಣ ಎಂದರೆ ಏನು ಹೇಳಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ:- ನೀವು ಲೇಟ್ ಆಗಿ ಬಂದಿದ್ದೀರಿ. ಸದನದಲ್ಲಿ ಏನು ನಡೆಯುತ್ತಿದೆ ಎಂದು ಗೊತ್ತಾಗುವುದಿಲ್ಲ...

ಶ್ರೀ ಎಸ್. ಬಂಗಾರಪ್ಪ:- ಆದಕ್ಕೇ ನಾನು ಹೇಳಿದೆ. ಆವತ್ತು ಮಾನ್ಯ ದೇಶಾಪಾಂಡೆಯವರು ಇರಲಿಲ್ಲ ಎಂದು ನಾನು ಹೇಳಿದ್ದು...

(ಗೊಂದಲ)

ಶ್ರೀ ಎಸ್. ಬಂಗಾರಪ್ಪ:- ವಿರೋಧಪಕ್ಷದ ನಾಯಕರಾಗಿ ನೀವೇ ಒಪ್ಪಿಕೊಂಡಿದ್ದೀರಿ. ಅದನ್ನೇ ಈಗಲೂ ನೇರವಾಗಿ ಒಪ್ಪಿಕೊಳ್ಳಿ. ನೀವು ಅದಕ್ಕೆ ಒಪ್ಪಿಕೊಂಡಿದ್ದೀರಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಕಾಗೋಡು ತಿಮ್ಮಪ್ಪನವರು ವಿಚಾರವನ್ನು ಮುಂದುವರಿಸುವುದಕ್ಕೆ ಅವಕಾಶವನ್ನು ಕೊಡಬೇಕು. ಇಷ್ಟೇ ನನ್ನ ಅಭಿಪ್ರಾಯ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೆ, ಅವರು ಹೇಳಿದ್ದರಿಂದ ನಾವೂ ಹೇಳಬೇಕಾಗುತ್ತದೆ. ಅವರು ಈಗ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ ಎಂದು ಹೇಳಿದ್ದಾರೆ. ಅವರು ಉತ್ತರ ಕೊಡಲಿ, ಅದಕ್ಕೆ ನಮ್ಮ ಅಭ್ಯಂತರ ಏನೂ ಇಲ್ಲ. ನಮ್ಮ ಪ್ರಶ್ನೆ ಏನಿತ್ತು ಅಂದರೆ, ಅದು ಸೀಮಿತವಾಗಿ ತಾವು ಬರುವುದಕ್ಕೆ ಮುಂಚೆ ನಡೆದುದಲ್ಲ. ಈ ಚರ್ಚೆಯ ವಿಚಾರದಲ್ಲಿ ನಮ್ಮ ಅಭಿಪ್ರಾಯವನ್ನು ಹೇಳಬೇಕು. ನಮ್ಮ ಪಕ್ಷದ ಅಭಿಪ್ರಾಯವನ್ನು ಹೇಳಬೇಕು. ಅದಕ್ಕೆ ನಾನು ರಿಟನ್ ಸ್ಟೇಟ್‌ಮೆಂಟ್ ಮಾಡಿದ್ದು.

ಶ್ರೀ ಎಸ್. ಬಂಗಾರಪ್ಪ:- ಅದು ಬಂದಾಗ ನಿಮ್ಮ ಪಕ್ಷದ ಅಭಿಪ್ರಾಯವನ್ನು ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ:- ಹೇಳುವುದಕ್ಕೆ ಅವಕಾಶವನ್ನು ಕೊಟ್ಟಿಲ್ಲ.

ಶ್ರೀ ಎಸ್. ಬಂಗಾರಪ್ಪ:- ಈಗ ಮಾನ್ಯ ಕಾಗೋಡು ತಿಮ್ಮಪ್ಪನವರದ್ದು ಮುಗಿದಿದೆಯೇ?

ಶ್ರೀ ಡಿ.ಬಿ. ಚಂದ್ರೇಗೌಡ:- ಅದಕ್ಕೆ ಅವರು ಇನಿಷಿಯೇಟ್ ಮಾಡಿದಮೇಲೆ ಅವಕಾಶ ಕೊಟ್ಟರು. ನಾನು ಮಾತನಾಡುವಾಗ ಅರ್ಧದಲ್ಲಿ ಅವರು ಪಾಯಿಂಟ್ ಆಫ್ ಆರ್ಡರನ್ನು ತೆಗೆದರು, ನೀವು ಮಧ್ಯೆ ಬಂದಿರಿ, ಆದ್ದರಿಂದ ನಿಮಗೆ ವಿವರ ಗೊತ್ತಿಲ್ಲ ಎಂದು ಹೇಳಿದೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ:- ನಿಯಮ 68ರಪ್ರಕಾರ ಮಾನ್ಯ ಕಾಗೋಡು ತಿಮ್ಮಪ್ಪನವರು ಏನು ಪ್ರಸ್ತಾಪವನ್ನು ಪ್ರಾರಂಭ ಮಾಡಿದ್ದಾರೆ ಅದು ಮುಗಿದಿದೆಯೇ? ನಿಯಮಾವಳಿಯ ಪ್ರಕಾರ ಅಜೆಂಡಾದಲ್ಲಿರುವುದನ್ನು ಮೂವ್ ಮಾಡದೆ, ನಿಮ್ಮ ಪಕ್ಷದ ಅಭಿಪ್ರಾಯ ಇರಬಹುದು, ಅದು ಬರುವುದಿಲ್ಲ. ಮೂವ್ ಎಂದರೇನು? 68ನೇ ನಿಯಮ ಏನು ಹೇಳುತ್ತದೆ?

(ಗೊಂದಲ)

ಅಧ್ಯಕ್ಷರು:- ಮೂವ್ ಎಂದರೆ ಏನು ಎಂಬುದನ್ನು ನಾನು ಹೇಳುತ್ತೇನೆ. ಮೂವ್ ಎಂದರೆ ಮಾನ್ಯ ಕಾಗೋಡು ತಿಮ್ಮಪ್ಪನವರು ತಮ್ಮ ಭಾಷಣವನ್ನು ಮುಗಿಸಬೇಕು. ಆಗಲೇ ಮೂವ್ ಮಾಡಿದ್ದು ಆಗುವುದು.

ಶ್ರೀ ಡಿ.ಬಿ. ಚಂದ್ರೇಗೌಡ:- ಹಾಗಾದರೆ ನಮಗೆ ಈಗ ಅವಕಾಶ ಇಲ್ಲ.....

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಅಧ್ಯಕ್ಷರೆ, ನಾನು ಚರ್ಚೆಯನ್ನು ಮಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು.

ಶ್ರೀ ಬಿ.ಹೆಚ್. ಬನ್ನಿಕೋಡ್:- ಆ ವರದಿಯನ್ನು ಸದನದಲ್ಲಿ ಸಲ್ಲಿಸಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ:- ಸನ್ಮಾನ್ಯ ಸಭಾಧ್ಯಕ್ಷರೆ, ತಾವು ಪಾರ್ಲಿಮೆಂಟಿನಲ್ಲಿ ಲೋಕಸಭೆಯಲ್ಲಿ ಕೆಲಸಮಾಡಿದ್ದೀರಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳುವುದನ್ನು ಕೇಳುವುದಕ್ಕೆ ನೀವು ಸಿದ್ಧವಾಗಿದ್ದರೆ – ನೀವು ಹೇಳುವುದನ್ನು ನಾವು ಕೇಳುತ್ತೇವೆ. ಇಲ್ಲದಿದ್ದರೆ ನೀವು ಹೇಳುವುದನ್ನು

ನಾವು ಕೇಳುತ್ತೇವೆಯೇ? ನಾವು ಹೇಳುವುದನ್ನು ಕೇಳುವುದಕ್ಕೆ ನೀವು ಸಿದ್ಧವಾಗಿಲ್ಲದಿದ್ದರೆ ನೀವು ಹೇಳುವುದನ್ನು ನಾವು ಕೇಳುವುದಕ್ಕೆ ಸಾಧ್ಯವಾಗುತ್ತದೆಯೆ?

ಶ್ರೀ ಡಿ.ಬಿ. ಚಂದ್ರೇಗೌಡ:- ನಿಮ್ಮನ್ನು ಕೇಳಿ ಎಂತಲೂ ನಾನು ಹೇಳಲಿಲ್ಲ, ಅವರನ್ನು, ಕೇಳಿ ಎಂತಲೂ ನಾನು ಹೇಳಲಿಲ್ಲ. ಸದನದಲ್ಲಿ ಏನು ನಡೆಯಿತು ಎಂಬುದು ನಿಮಗೆ ಗೊತ್ತಿಲ್ಲ, ನೀವು ತಡವಾಗಿ ಬಂದಿರಿ ಎಂದು ಹೇಳಿದೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ:- ಇಲ್ಲಿ ಏನು ನಡೆದಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೇ ಇಲ್ಲಿ ಕುಳಿತುಕೊಂಡಿರಲಿಲ್ಲವಾದರೂ ನಾವು ಚೆನ್ನಾಗಿ ತಿಳಿದುಕೊಂಡಿದ್ದೇವೆ. ಇದು ಅಂಥ ಮಹಾ ದೊಡ್ಡ ಯಕ್ಷ ಪ್ರಶ್ನೆ ಏನೂ ಅಲ್ಲ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು ನಿಮಗೆ ವಿಷಯವನ್ನು ತಿಳಿಸಬೇಕೆಂದಿದ್ದೆ. ನೀವೇ ಬೇಡ ಎಂದು ಹೇಳುವುದಾದರೆ ಬೇಡ ಬಿಡಿ. ನೀವು ಸರ್ವಜ್ಞರು ಎನ್ನುವುದು ಗೊತ್ತಿದೆ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ:- ಬಹುಶ: ಸರ್ವಜ್ಞ ಬಹಳ ಶತಮಾನಗಳ ಹಿಂದೆಯೇ ಆಗಿಹೋಗಿದ್ದಾನೆ. ನಾವು ಈಗ ಸರ್ವಜ್ಞನ ವಿಚಾರ ಏಕೆ ಹೇಳುವುದು. ಮಾನ್ಯ ಅಧ್ಯಕ್ಷರೆ, ತಾವೂ ಕೂಡ ಲೋಕಸಭೆಯಲ್ಲಿ ಕೆಲಸಮಾಡಿದ್ದೀರಿ. ಮಾನ್ಯ ವಿರೋಧಪಕ್ಷದ ನಾಯಕರೂ ಕೂಡ ಲೋಕಸಭೆಯಲ್ಲಿ ಮತ್ತು ರಾಜ್ಯಸಭೆಯಲ್ಲಿ ಕೆಲಸಮಾಡಿದ್ದಾರೆ. ತಮಗೂ ಗೊತ್ತಿದೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯ ರಿಪೋರ್ಟ್ ಆಗಲಿ, ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಕಮಿಟಿಯ ರಿಪೋರ್ಟ್ ಆಗಲಿ ಅಥವಾ ಇನ್ನೂ ಬೇರೆ ಬೇರೆ ಸಮಿತಿಗಳ ಯಾವುದೇ ವರದಿಯಾಗಿರಲಿ ಅದು ಲೋಕಸಭೆಯಲ್ಲಿರಬಹುದು, ಅಥವಾ ಈ ಸದನದಲ್ಲಿರಬಹುದು, ಪರಂಪರೆಯ ಪ್ರಕಾರ ಅನೆಕ್ಷರ್ಸ್, ವಿಟ್ನೆಸಸ್ ಲಿಸ್ಟ್, ವಿಟ್ನೆಸಸ್ ಸ್ಟೇಟ್‌ಮೆಂಟ್ಸ್ that may be there in the office or that may be used for a reference. ಆದರೆ ಪ್ರಾಮುಖ್ಯವಾಗಿ ಸದನದ ಮುಂದೆ ಬರುವುದು ಎಂದರೆ ವರದಿ. ವಾಲ್ಯೂಂ-1, ವಾಲ್ಯೂಂ-2, ಅಥವಾ ವಾಲ್ಯೂಂ-2ರಲ್ಲಿ ಪಾರ್ಟ್-1, ಪಾರ್ಟ್-2, ಅದು ವಿಟ್ನೆಸಸ್ ಸ್ಟೇಟ್‌ಮೆಂಟ್ ಇರಬಹುದು ಅಥವಾ ಅನೆಕ್ಷರ್ಸ್ ಇರಬಹುದು, but what is important is, the main report containing the recommendations. ಅದನ್ನು ಈ ಸದನದ ಚರ್ಚೆಗೆ ಅನುಕೂಲವಾಗಲೆಂದು ನಾವು ಹಚ್ಚಿದ್ದೇವೆ. Supposing, the annexure and other things if you want to go through we will place it before the House. you can make use of it. For the purpose of the debate they can always make use of it. ಮಾನ್ಯ ಅಧ್ಯಕ್ಷರೆ, ಒಂದು ವಿಚಾರವನ್ನು ಸ್ಪಷ್ಟೀಕರಣ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ನ್ಯಾಯಮೂರ್ತಿ ಕುಲದೀಪ್‌ಸಿಂಗ್‌ರವರ ವರದಿಯನ್ನು ಇಲ್ಲಿ ಚರ್ಚೆ ಮಾಡತಕ್ಕಂಥದ್ದು ಅಲ್ಲ. ಇಲ್ಲಿ ಚರ್ಚೆ ಮಾಡತಕ್ಕಂಥದ್ದು ಅವರು ಒಂದು ವರದಿ ಕೊಟ್ಟಮೇಲೆ ಉದ್ಭವವಾದಂಥ ಒಂದು ಪರಿಸ್ಥಿತಿಯ ಮೇಲೆ ಇವತ್ತು ಚರ್ಚೆ ಮಾಡುತ್ತಿದ್ದೇವೆ. ಅವರು ಕೇಳುತ್ತಿರುವುದು ಅಷ್ಟೆ. ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಇನ್ನು ಮುಂದೆ ಕೂಡ ಚರ್ಚೆ ಮುಂದುವರಿಸಲು ಇದರ ವಿಚಾರವಾಗಿ ಮಾನ್ಯ ವಿರೋಧಪಕ್ಷದ ನಾಯಕರಾಗಲಿ, ಮಾನ್ಯ ವಿರೋಧಪಕ್ಷದ ಸದಸ್ಯರಾಗಲಿ ಇಲ್ಲಿ ಹೇಳಿದರು, ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಹೇಳಿದರು. ಈ ಕುಲದೀಪ್ ಸಿಂಗ್ ವರದಿಯ ಬಗ್ಗೆ ಚರ್ಚೆಯಾಗಬೇಕೆಂದು ಹೇಳಿದ್ದಾರೆ. ಅವರೆ ಒಂದು ಹೆಜ್ಜೆ ಮುಂದೆ ಹೋಗಿ ವರದಿ ಚರ್ಚೆಯಾಗಲಿ, ಸತ್ಯಾಂಶ ಹೊರಬೀಳಲೆಂದು ಅವರೇ ಹೇಳಿದಾಗ ಏತಕ್ಕೆ ಹೀಗೆ ವಿಚಾರ ಮಾಡುತ್ತಾರೆಯೋ ಗೊತ್ತಿಲ್ಲ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಈ ರೀತಿ ಜವಾಬ್ದಾರಿ ಇರತಕ್ಕಂಥ ಮಂತ್ರಿಗಳು ಹೇಳಬಾರದು. ಈ ರೀತಿ ಹೇಳಿಕೆಯನ್ನು ಕೊಡಬಾರದು.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ:- ನಾನು ಹೇಳತಕ್ಕಂಥ ಅಭಿಪ್ರಾಯಗಳನ್ನು ಮಾನ್ಯ ವಿರೋಧಪಕ್ಷದ ನಾಯಕರು ಕೇಳತಕ್ಕಂಥ ಸಹನೆ ಅವರಿಗೆ ಇಲ್ಲ. ಯಾವ ಆಧಾರದ ಮೇಲೆ ಹೇಳುತ್ತೀರಿ.

ಶ್ರೀ ಡಿ.ಬಿ. ಚಂದ್ರೇಗೌಡ:- ನನ್ನ ಅಭಿಪ್ರಾಯವನ್ನು ಈ ಸದನದ ಪಟಲದ ಮೇಲೆ ಇರುವುದಕ್ಕಾದರೂ ಅವಕಾಶ ಕೊಡುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ:- ಈಗ ಆಗುವುದಿಲ್ಲ. ಈ ಹಂತದಲ್ಲಿ ಅಗುವುದಿಲ್ಲ. No he cannot speak.

(ಗೊಂದಲ)

MR. SPEAKER:- Mr.Leader of the Opposition, I am bound by the rules 68, 69 and 70. You can have your say after Mr.Kagodu Thimmappa has his say.

SRI D.B. CHANDREGOWDA:- My question is before he opens up we have an objection which should be registered here. I am well within my rights.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ:- ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ಒಂದು ಮನವಿ ಮಾಡಿಕೊಳ್ಳುತ್ತೇನೆ. ಈಗ 68ನೇ ನಿಯಮದ ಮೇರೆಗೆ ಚರ್ಚೆ ಪ್ರಾರಂಭವಾಗಿದೆ. ಚರ್ಚೆ ನಡೆಯಲಿ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ನಮಗೆ ಅವಕಾಶವಿಲ್ಲವೆಂದರೆ ಚರ್ಚೆ ಮಾಡುವುದು ಸರಿಯಲ್ಲ. ಯಾವುದೇ ನಿಯಮಾವಳಿ ಪ್ರಕಾರ ಚರ್ಚೆ ಮಾಡುವುದಕ್ಕೆ ಯಾವುದೇ ತೊಂದರೆ ಇಲ್ಲ. ಈ ಸಮರವನ್ನು ಈಗಲೂ ನಿಲ್ಲಿಸುವುದಕ್ಕೆ ತಾವು ಪ್ರಯತ್ನ ಮಾಡಬೇಕು ಎಂದು ನಾನು ಪ್ರಾರ್ಥನೆ ಮಾಡುತ್ತೇನೆ. ಅದು ಸಾಧ್ಯವಿಲ್ಲ ಎಂದಾದರೆ ನನ್ನ ಅಭಿಪ್ರಾಯವನ್ನೂ.....

(ಗೊಂದಲ)

ಅಧ್ಯಕ್ಷರು:- ಮಾನ್ಯ ವಿರೋಧಪಕ್ಷದ ನಾಯಕರೆ, ತಾವು ಹಿಂದೆಯೂ ಕೂಡ ಟೆಲಿಫೋನ್ ಕದ್ದಾಲಿಕೆಯ ಪ್ರಕರಣ ಬಂದಾಗಲೂ ಕೂಡ ಇದೇ ಸಂಶಯವನ್ನು ವ್ಯಕ್ತಪಡಿಸಿದ್ದಿರಿ. ಆ ಸಂಶಯವೇನೆಂದರೆ, ನಾನು ಈ ಚರ್ಚೆಗೆ ಅವಕಾಶ ಮಾಡಿಕೊಡವುದರ ಮೂಲಕ ಸಂಸತ್ತಿಗೆ ಮತ್ತು ಶಾಸನಸಭೆಗೆ ಒಂದು ಸಮರವನ್ನು ನಡೆಸಲು ನೀವು ಅವಕಾಶವನ್ನು ಮಾಡಿ ಕೊಟ್ಟಂತಾಗುತ್ತದೆಂದು ಹೇಳಿದ್ದಿರಿ. ಆ ಚರ್ಚೆಯೂ ನಡೆಯಿತು, ಸಮರ ನಡೆಯಲಿಲ್ಲ. ಆದ್ದರಿಂದ ಆ ಶಂಕೆ ನಿಮಗೆ ಬೇಡ. ಮಾನ್ಯ ಕಾಗೋಡು ತಿಮ್ಮಪ್ಪನವರು ನಿಯಮ 68ರ ಪ್ರಕಾರ ಚರ್ಚೆ ಪ್ರಾರಂಭಿಸಲಿ. ಅನಂತರ ನಿಮ್ಮ ಅನಿಸಿಕೆಗಳು ಏನೇ ಇರಲಿ ಅದನ್ನು ಹೇಳುವುದಕ್ಕೆ ಸಂಪೂರ್ಣವಾಗಿ ನಿಮಗೆ ಅವಕಾಶವನ್ನು ಕೊಡುತ್ತೇನೆ.

(ಗೊಂದಲ)

(ಈ ನಿಟ್ಟಿನಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಾ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವಕಾಶವಾಗಲಿಲ್ಲ ಇಂಥ ಪ್ರವೃತ್ತಿಯನ್ನು ಪ್ರತಿಭಟಿಸುತ್ತೇನೆಂದು ಹೇಳಿ ಸಭಾತ್ಯಾಗ ಮಾಡಿದರು. ಜೊತೆಯಲ್ಲಿ ಜನತಾದಳದ ಎಲ್ಲ ಮಾನ್ಯ ಸದಸ್ಯರು ಕೂಡ ಸಭಾತ್ಯಾಗ ಮಾಡಿದರು.)

(ಭಾರೀ ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯ:- ನಾನು ರೂಲಿಂಗ್ ಅನ್ನು ಪ್ರಶ್ನೆ ಮಾಡುತ್ತಿಲ್ಲ.....

(ಗೊಂದಲ)

(ಮಾನ್ಯ ಸಿಂಧ್ಯರವರು ಸಭಾತ್ಯಾಗ ಮಾಡಿದರು)

(ಆಡಳಿತ ಪಕ್ಷ ಸದಸ್ಯರು ಷೇಂ ಷೇಂ ಎಂದು ಕೂಗುತ್ತಿದ್ದರು)

ಅಧ್ಯಕ್ಷರು:- ಮಾನ್ಯ ಸಂಸದೀಯ ಸಚಿವರು ಮತ್ತು ಮಾನ್ಯ ಶಿಕ್ಷಣ ಸಚಿವರು ಏನು ಕ್ರಿಯಾಲೋಪ ಎತ್ತಿದರು ಆ ಕ್ರಿಯಾಲೋಪವನ್ನು ನಾನು ಎತ್ತಿಹಿಡಿದಿದ್ದೇನೆ. 68,69,80ನೇ ವಿಧಿನಿಯಮದ ಅಡಿಯಲ್ಲಿ ಚರ್ಚೆ ಪ್ರಾರಂಭವಾಗುವ ಮುನ್ನ ಯಾವುದೇ ಸದಸ್ಯರು ಯಾವುದೇ ಹೇಳಿಕೆಯನ್ನು ಕೊಡಲು ಸಾಧ್ಯವಿಲ್ಲ; ಹಾಗೆ ಕೊಟ್ಟರೂ ಅದು ಸದನದ ಕಾರ್ಯಕಲಾಪಗಳ ಕಡತಕ್ಕೆ ಹೋಗುವುದಿಲ್ಲ. ಈ ರೂಲಿಂಗ್ ಎಲ್ಲ ಕಾಲಕ್ಕೂ, ಎಲ್ಲ ಸನ್ನಿವೇಶಕ್ಕೂ ಅನ್ವಯಿಸುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ತಮ್ಮ ತೀರ್ಮಾನಕ್ಕೆ ನನ್ನದೇನು ವಿರೋಧವಿಲ್ಲ. ಆದರೆ.....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ತಾವು ವಿರೋಧ ಪಕ್ಷ ನಾಯಕರನ್ನು ಕರೆದು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಿರಿ. ಅದು ರೆಕಾರ್ಡಿಗೆ ಹೋಗುತ್ತದೆಯೇ? ಅದನ್ನು ಕೇಳುವುದಕ್ಕೂ ನನಗೆ ಅಧಿಕಾರ ಇಲ್ಲವೆ? ಪ್ರಾರಂಭದಲ್ಲಿ ತಾವು ವಿರೋಧ ಪಕ್ಷದ ನಾಯಕರನ್ನು ಕರೆದಿರಿ. ಅವರು ಸ್ಟೇಟ್‌ಮೆಂಟ್ ಮಾಡುವುದಕ್ಕೆ ಶುರು ಮಾಡಿದರು. ಅರ್ಧ ಮಾಡಿದ ನಂತರ ಗೊಂದಲ ಶುರುವಾಯಿತು. ಅಬ್ಜಕ್ಷನ್ ಮಾಡಿದರು. ತಾವು ಮಾತನಾಡುವುದಕ್ಕೆ ಅನುಮತಿ ಕೊಟ್ಟದ್ದು ರೆಕಾರ್ಡಿಗೆ ಹೋಗಿದೆಯೇ ಇಲ್ಲವೇ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ.

ಅಧ್ಯಕ್ಷರು:- ಯಡಿಯೂರಪ್ಪನವರಿಗೆ ನನ್ನ ಅಭಿನಂದನೆಗಳು, ವಂದನೆಗಳು. ನಾನು ಮಾನ್ಯ ವಿರೋಧಪಕ್ಷದ ನಾಯಕರಿಗೆ ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕು ಎನ್ನುವ ಉದ್ದೇಶದಿಂದ ಅವರನ್ನು ಕರೆದೆ. ಆದರೆ ಅವರು ಸುಪ್ರೀಂ ಕೋರ್ಟಿನ ಉಲ್ಲೇಖ ಮಾಡಿ ಅವರ the tone and tenor of the statement which the Leader of the Opposition was about to make, I could make out. He was ultimately trying to question the ruling which I had given. Then he was trying to circumvent rules 68,69 and 70 of the Rules of Procedure. I upheld the point of order. When I uphold the point of order, naturally I don't approve of....

ನಿಯಮ 68ರ ಮೇರೆಗೆ

ಬೆಂಗಳೂರಿನ ಹೊಸೂರು ಸರ್ಜಾಪುರದಲ್ಲಿರುವ 110 ಎಕರೆ ಜಾಗವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅನಿವಾಸಿ ಭಾರತೀಯರಿಗೆ ಮಂಜೂರು ಮಾಡಿದ ಹಿನ್ನೆಲೆಯಲ್ಲಿ ನೇಮಿಸಲಾದ ನ್ಯಾಯಮೂರ್ತಿ ಕುಲದೀಪ್‌ಸಿಂಗ್ ವಿಚಾರಣಾ ಆಯೋಗದ ತೀರ್ಪಿನಿಂದ ಉದ್ಭವಿಸಿರುವ ಪರಿಸ್ಥಿತಿಯ ಬಗ್ಗೆ ಚರ್ಚಿಸುವುದು.

† ಶ್ರೀ ಕಾಗೋಡುತಿಮ್ಮಪ್ಪ (ಸಾಗರ):- ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮ ಮುಂದಿರತಕ್ಕ ಪ್ರಸ್ತಾವನೆ ಅತ್ಯಂತ ಪ್ರಮುಖವಾದ ಪ್ರಸ್ತಾವನೆ. ನನಗೆ ಈಗಲೂ ಆಶ್ಚರ್ಯ ಅನ್ನಿಸುತ್ತದೆ, ಇಂಥ ಒಂದು ಪ್ರಮುಖವಾದ ವಿಷಯವನ್ನು ಚರ್ಚೆ ಮಾಡಬೇಕು. ನಮ್ಮ ಅಭಿಪ್ರಾಯವನ್ನು ಹೇಳಬೇಕು, ಈ ಸದನದ ಅಭಿಪ್ರಾಯವನ್ನು ಕೇಳಬೇಕು ಎನ್ನುವ ಸಹನೆ, ಸೌಜನ್ಯ ನಮ್ಮ ವಿರೋಧಪಕ್ಷದವರಿಗೆ